# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY



ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

80,000

HAMPI TIMES E-PAPER READERS

94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ: 51 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 18.08.2024 • ಭಾನುವಾರ • ಪುಟ:04 • ಬೆಲೆ:2

Volume:02 • Issue: 51 • PRGI No:KARKAN/2023/88055 • VIJAYANAGARA • 18.08.2024 • Sunday • Page:04 • Rs:2



ಮನಸ್ಸು ಮಾಡು ಕರ್ತವ್ಯ ನಿಷ್ಠನಾಗು ಕಾದು ನೋಡು

ಪುಟ: 4ರಲ್ಲಿ ನೋಡಿ

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!

ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು

ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ

SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...

HAMPI TIMES VIJAYANAGARA

ಹಂಪಿ ಟೈಮ್ಸ್ ಇ-ಪೇಪರ್

94486 33038 | www.hampitimes.com / epaper.hampitimes.com | Vijayanagara | hampitimes@gmail.com



ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ

Place your ads here reach more readers

Why Choose Us?

- Experienced Professionals
- Fast and Reliable Service
- Customized Solutions
- Competitive Pricing

No.1 ಪತ್ರಿಕೆ ದಿನಪತ್ರಿಕೆ

E-mail: hampitimes@gmail.com
www.hampitimes.com
epaper.hampitimes.com
9448633038


# ಸರ್ವರ ನ್ಯಾಯಾಧಿಪತಿ ಕರ್ಮಫಲದಾತ ಶನೇಶ್ವರ

## ಉಜ್ಜಯಿನಿ ಜಗದ್ಗುರು ಶ್ರೀಗಳ ಹೇಳಿಕೆ। ಪ್ರತಿಯೊಬ್ಬರ ಚಿಂತನೆಯೂ ಮತ್ತೊಬ್ಬರ ಜೀವನ ಆನಂದಗೊಳಿಸುವಂತಿರಲಿ

## ಸತ್ಕಾರ್ಯಗಳನ್ನು ಮಾಡುವವರನ್ನು ಸದಾ ಕಾಪಾಡುತ್ತಾನೆ । ದುಷ್ಕೃತ್ಯಗಳಲ್ಲಿ ತೊಡಗಿದವರನ್ನು ಕಾಡದೆ ಬಿಡನು

**ಹಂಪಿ ಟೈಮ್ಸ್ ಹೊಸಪೇಟೆ**

ತಂದೆ, ತಾಯಿ, ಹಿರಿಯರನ್ನು ನೋಯಿಸದೇ ಪ್ರೀತಿಯಿಂದ ಕಾಣುವುದರೊಂದಿಗೆ, ಯಾರು ಆರೈಕೆ ಮಾಡುತ್ತಾರೋ ಮತ್ತು ಸದಾ ಸತ್ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೋ ಅಂತವರನ್ನು ಶನೇಶ್ವರ ಎಂದಿಗೂ ಕಾಡಲಾರದೆ, ಕಠಿಣ ಸಂದರ್ಭಗಳಲ್ಲೂ ಕಾಪಾಡುತ್ತಾನೆ ಎಂದು ಉಜ್ಜಯಿನಿ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾಯ ಮಹಾಸ್ವಾಮಿಗಳು ಹೇಳಿದರು.

ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿ 50, ಪಂಚಾಚಾರ್ಯ ನಗರದಲ್ಲಿನ ಶ್ರೀ ಶನೇಶ್ವರ ದೇವಸ್ಥಾನದಲ್ಲಿ ದೇವಸ್ಥಾನ ಸಮಿತಿ ಹಮ್ಮಿಕೊಂಡಿದ್ದ ಶ್ರೀಶನಿದೇವರ ಪ್ರತಿಷ್ಠಾಪಿಸಿದ 27ನೇ ವಾರ್ಷಿಕೋತ್ಸವ ಸಮಾರಂಭದ ದಿವ್ಯ ಸಾನ್ನಿಧ್ಯವಹಿಸಿ ಶನಿವಾರ ಆಶೀರ್ವಚನ ನೀಡಿದರು. ಶನೇಶ್ವರ ಎಂದಾಕ್ಷಣ ಅತ ಕೆಟ್ಟಗ್ರಹ, ಕಾಡುತ್ತಾನೆ ಎಂಬ ತಪ್ಪು ನಂಬಿಕೆ ಹಲವರಲ್ಲಿದೆ. ಆದರೆ ಶನೇಶ್ವರ ಸರ್ವರು ಮಾಡುವ ಪಣ್ಯ, ಪಾಪದ ಕರ್ಮಗಳಿಗನುಸಾರವಾಗಿ ಕರ್ಮಫಲ ನೀಡುವ ನ್ಯಾಯಾಧಿಪತಿಯಾಗಿದ್ದಾನೆ. ತಾನು ಮಾಡುವ ಕೃತ್ಯಗಳು ಯಾರಿಗೂ ಗೊತ್ತೋಗೋದಿಲ್ಲವೆಂದು ದುಷ್ಕೃತ್ಯಗಳಲ್ಲಿ ತೊಡಗಿದರೆ ಶನಿ ಕಾಡದೆ ಬಿಡಲಾರನು. ಯಾರಿಗೂ ತಿಳಿಯದಂತೆ ಸತ್ಕಾರ್ಯಗಳನ್ನೇ ಮಾಡುತ್ತಾ ಬಂದವರನ್ನೂ ಶನೇಶ್ವರ ಕೈಬಿಡದೆ ಕಾಪಾಡುತ್ತಾನೆ. ಹಾಗಾಗಿ ಪ್ರತಿಯೊಬ್ಬರೂ ಸತ್ಯ ಹಾಗೂ ಸನ್ಮಾರ್ಗದಲ್ಲಿ ನಡೆಯಬೇಕು. ಕೆಲವರು ಸದಾ ಸತ್ಕಾರ್ಯಗಳನ್ನು ಮಾಡುತ್ತಾ ಬಂದಿದ್ದರೂ ನೆಮ್ಮದಿ ಮತ್ತು ಇಷ್ಟಾರ್ಥಗಳು ಈಡೇರುತ್ತಿಲ್ಲವೆಂದು ಕೊರಗುವುದುಂಟು ಆದರೆ ಅದು ಅವರ ಹಿಂದಿನ ಜನ್ಮದ ಕರ್ಮಫಲವಾಗಿರುತ್ತದೆ. ಈ ಜನ್ಮದಲ್ಲಿ ಸತ್ಕಾರ್ಯಗಳನ್ನು ಮುಂದುವರೆಸಿದಾಗ ಭವಿಷ್ಯದಲ್ಲಿ ಉತ್ತಮ ಫಲ ದೊರೆಯುತ್ತವೆ. ಕೆಲವರು ಸತ್ಕಾರ್ಯದಲ್ಲಿ ತೊಡಗಿಸಿಕೊಳ್ಳದಿದ್ದರೂ ಐಷರಾಮಿ ಜೀವನ ಮಾಡುವವರನ್ನು ಕೆಲವರು ನೋಡಿರುತ್ತಾರೆ. ಅದು ಅವರ ಹಿಂದಿನ ಜನ್ಮದ ಪಣ್ಯಕಾರ್ಯಗಳ ಫಲವಾಗಿರುತ್ತದೆ. ಈ ಜನ್ಮದಲ್ಲಿ ಮುಂದುವರೆಸದಿದ್ದರೆ ಭವಿಷ್ಯದಲ್ಲಿ ಅದರೆ ಫಲ ಅನುಭವಿಸುತ್ತಾರೆ. ನಾವು ಮಾಡುವ ಪ್ರತಿ ಕಾಯಕವನ್ನು ಶನೇಶ್ವರ ನಮ್ಮ ಬೆನ್ನಹಿಂದೆ ಇದ್ದು ಗಮನಿಸುತ್ತಾನೆ. ಅದು ನಮಗೆ ಗೊತ್ತೋಗೋದಿಲ್ಲ. ಹಾಗಾಗಿ ಪ್ರತಿಯೊಬ್ಬರ ಚಿಂತನೆಯೂ ಮತ್ತೊಬ್ಬರ ಜೀವನವನ್ನು ಆನಂದವಾಗಿಸುವಂತಿರಲಿ ಎಂದು ಹೇಳಿದರು.

ಶ್ರೀಶೈಲ ಶಾಖಾಪೀಠ ಮರಿಯಮ್ಮನಹಳ್ಳಿ >>2




## ಮೈಕ್ರೋ ನ್ಯೂಸ್


### ಯುವಕ-ಯುವತಿಯರಿಗೆ ಕೆ.ಎ.ಎಸ್ ಪರೀಕ್ಷೆಗೆ ಪೂರ್ವ ತರಬೇತಿಗಾಗಿ ದಿನದ ಕಾರ್ಯಾಗಾರ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ಮತ್ತು ಜಿಲ್ಲಾ ಖನಿಜಾ ಪ್ರತಿಷ್ಠಾನ ಟ್ರಸ್ಟ್ ಅನುದಾನದಡಿ ಬಳ್ಳಾರಿಯ ಗ್ರಾಮೀಣ ಮತ್ತು ನಗರ ಪ್ರದೇಶದ ನಿರುದ್ಯೋಗಿ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಹತೆವುಳ್ಳ ಯುವಕ–ಯುವತಿಯರಿಗೆ ಕೆ.ಎ.ಎಸ್ ಪರೀಕ್ಷೆಗೆ ಉಚಿತವಾಗಿ ಪರೀಕ್ಷಾ ಪೂರ್ವ ತರಬೇತಿ ನೀಡಲು ಉದ್ದೇಶಿಸಿದ್ದು, ಪೂರ್ವಭಾವಿಯಾಗಿ "ಒಂದು ದಿನದ ಕಾರ್ಯಾಗಾರವನ್ನು" ಹಮ್ಮಿಕೊಳ್ಳಲಾಗಿದೆ.

ಆಸಕ್ತ 21 ರಿಂದ 35 ವರ್ಷದೊಳಗಿನ ಅಭ್ಯರ್ಥಿಗಳು ಆಗಸ್ಟ್ 21 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ನಡೆ ಯುವ ಕಾರ್ಯಾಗಾರದಲ್ಲಿ ಭಾಗವಹಿಸಿ, ಅರ್ಹತಾ ಪರೀಕ್ಷೆಗೆ ನಿಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬಹುದು.

ಕಾರ್ಯಾಗಾರದಲ್ಲಿ ಭಾಗವಹಿಸಿದ ಅರ್ಹ ಆಯ್ದ ಅಭ್ಯರ್ಥಿಗಳಿಗೆ ಮಾತ್ರ ಈ ತರಬೇತಿಗೆ ಅವಕಾಶ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೌಶ್ಯಲಾಭಿವೃದ್ಧಿ ಕಚೇರಿ ಅಥವಾ ದೂ.08392–294230 ಮತ್ತು ಮೊ.9964502514, 9844444958, 8073852104 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


# ಟಿಬಿ ಡ್ಯಾಂಗೆ ಕ್ರಸ್ಟ್ ಗೇಟಲ್ಲ, ಸ್ಟಾಪ್‌ಗೇಟ್ ಅಳವಡಿಕೆ

## ತಜ್ಞ ಕನ್ನಯ್ಯ ನಾಯ್ಡು ಹೇಳಿಕೆ। ಗೇಟ್‌ಗಳ ಆಯಸ್ಸು 40 ವರ್ಷ ಆದರೆ 70 ವರ್ಷ ಬಾಳಿಕೆ ಬಂದಿವೆ

**ಹಂಪಿ ಟೈಮ್ಸ್ ಹೊಸಪೇಟೆ**

ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್ ಗೇಟ್ ಕಳಚಿ ಬಿದ್ದಿರುವ ಜಾಗದಲ್ಲಿ ವಾಟರ್ ಸ್ಟಾಪೇಜ್ ಎಲಿಮೆಂಟ್ ನಿಲ್ಲಿಸಲಾಗಿದೆ. ಆದರೆ, ಅದು ನೀರು ಬಿಡುವ ಕ್ರಸ್ಟ್‌ಗೇಟ್ ಅಲ್ಲ. ನೀರನ್ನು ತಡೆಯಲು ಮಾತ್ರ ಗೇಟ್ ಅಳವಡಿಸಲಾಗಿದೆ. ಮುಂದಿನ ಮಳೆಗಾಲದ ವೇಳೆಗೆ ಕ್ರಸ್ಟ್ ಗೇಟ್ ಅಳವಡಿಸಿಕೊಳ್ಳಬೇಕು ಎಂದು ಜಲಾಶಯಗಳ ಸುರಕ್ಷತಾ ತಜ್ಞ ಕನ್ನಯ್ಯ ನಾಯ್ಡು ಹೇಳಿದರು.

ನಗರದ ಟಿಬಿ ಬೋರ್ಡ್ ಪ್ರವಾಸಿ ಮಂದಿರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಜಲಾಶಯದ 19ನೇ ಕ್ರಸ್ಟ್ ಗೇಟ್ ಕಳಚಿ ಬಿದ್ದ ಜಾಗದಲ್ಲಿ ಸ್ಟಾಪ್ ಲಾಗ್ ನ ಮೊದಲ ಎಲಿಮೆಂಟ್ ಕೂರಿಸುವಲ್ಲಿ ನಾವು ಯಶಸ್ವಿಯಾಗಿದ್ದೇವೆ ಎಂಬುದು ಸಂತಸ ತಂದಿದೆ. ಸ್ಟಾಪ್‌ಲಾಗ್ ಎಲಿಮೆಂಟ್‌ಗಳಿಂದ ನಿಂದ ಸುಮಾರು 100 ಟಿಎಂಸಿ ನೀರು ಸಂಗ್ರಹಿಸಬಹುದು. ಸ್ಟಾಪ್‌ಲಾಗ್ ನ ಐದು ಎಲಿಮೆಂಟ್‌ಗಳು ಅಳವಡಿಸಲಾಗಿದ್ದು, ತಲಾ 25 ಟಿಎಂಸಿ ನೀರನ್ನು ತಡೆಹಿಡಿಯಲಿದೆ. ಕಾಲನುಕ್ರಮಕ್ಕೆ ತಕ್ಕಂತೆ ಕ್ರಸ್ಟ್ ಗೇಟ್‌ಗಳನ್ನು ಬದಲಾಯಿಸುವಂತೆ ಸರ್ಕಾರಕ್ಕೆ ಸಲಹೆ ಒಳಗೊಂಡ ವರದಿ ಸಲ್ಲಿಸಲಾಗುವುದು. ಜಲಾಶಯದಲ್ಲಿ ಎಷ್ಟೇ ನೀರು ಸಂಗ್ರಹವಿದ್ದು, ಎಷ್ಟೇ ರಭಸವಾಗಿ ಧುಮ್ಮಿಕ್ಕಿದರೂ ಸ್ಟಾಪ್ ಲಾಗ್ ತಡೆದುಕೊಳ್ಳಲಿದೆ. ಆದರೆ, ನೀರಿನ ಹೊರ ಹರಿವನ್ನು ಅದು ಕಂಟ್ರೋಲ್ ಮಾಡಲಾಗದು. ಇದನ್ನೇ ಇನ್ನಷ್ಟು ವರ್ಷಗಳ ವರೆಗೆ ಬಳಕೆ ಮಾಡಿಕೊಳ್ಳಬಹುದು. ಆದರೂ, ಜಲಾಶಯದ ಗೇಟ್‌ಗಳ ಆಯಸ್ಸು 40 ವರ್ಷ. ಆದರೆ, ಈವರೆಗೆ ಅವು 70 ವರ್ಷ ಬಾಳಿಕೆ ಬಂದಿವೆ. ಹಿಂದಿನ ಡ್ಯಾಂ ಸೇಫ್ಟಿ ವರದಿಯನ್ವಯ ಎಲ್ಲ ಗೇಟ್‌ಗಳನ್ನು ಹೊಸದಾಗಿ ಅಳವಡಿಕೆಗೆ ಸಲಹೆ ನೀಡಿ ಶೀಘ್ರವೇ ಕೇಂದ್ರ ಸರ್ಕಾರದ ಸಿಡಬ್ಲ್ಯುಸಿ, ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಮುಖ್ಯಮಂತ್ರಿಗೆ ವರದಿ ನೀಡುವುದಾಗಿ ತಿಳಿಸಿದರು.





# ಕಣ್ಣೀರು ತರಿಸುವ ಬದಲಿಗೆ ಒರೆಸುವ ಮಕ್ಕಳಾಗಿ ಬೆಳೆಯಿರಿ



**ಹಂಪಿ ಟೈಮ್ಸ್ ಕೂಡ್ಲಿಗಿ**

ವಿದ್ಯಾರ್ಥಿಗಳು ಪೋಷಕರಿಗೆ ಕಣ್ಣಿರು ಒರೆಸುವ ಮಕ್ಕಳಾಗಬೇಕೆ ವಿನಹಃ, ಕಣ್ಣಿರು ಬರಿಸುವ ಮಕ್ಕಳಾಗಬಾರದು ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವಿಜಯನಗರ ಜಿಲ್ಲಾ ನಿರ್ದೇಶಕ ಸತೀಶ್ ಶೆಟ್ಟಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶನಿವಾರ ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಸುಜ್ಞಾನ ನಿಧಿ ವಿಧ್ಯಾರ್ಥಿ ವೇತನ ನೀಡುವ ಕಾರ್ಯಕ್ರಮದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ವಿಧ್ಯಾರ್ಥಿಗಳಿಗೆ ಪ್ರಸ್ತುತ ದಿನಗಳಲ್ಲಿ ಅಂಕಗಳಿಗೆ ಸೀಮಿತರಾಗದೇ ಮಾನವೀಯ ಮೌಲ್ಯಗಳನ್ನು ಬೆಳಸಿಕೊಳ್ಳಬೇಕು. ಪೋಷಕರು ತಮ್ಮ ಎಷ್ಟೇ ಕಷ್ಟವಿದ್ದರು, ಮಕ್ಕಳ ಜ್ಞಾನಾರ್ಜನಗೆ ಕೂಲಿ, ನಾಲಿ ಮಾಡಿ ಶಿಕ್ಷಣ ಕೊಡಿಸುತ್ತಾರೆ. ಅತಂಹ ವಿಧ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಧರ್ಮಸ್ಥಳ ಸಂಸ್ಥೆಯು ಪ್ರತಿ ತಿಂಗಳು ಅವರ ಖಾತೆಗೆ ಶಿಷ್ಯವೇತನ ನೀಡುವ ಮಹತ್ತರ ಕಾರ್ಯ ಮಾಡುತ್ತಿದೆ. ಈಗಾಗಲೇ ಜಿಲ್ಲೆಯ 582 ವಿಧ್ಯಾರ್ಥಿಗಳಿಗೆ, ತಾಲೂಕಿನ 106 ವಿಧ್ಯಾರ್ಥಿಗಳಿಗೆ ಪ್ರಸ್ತುತ ವರ್ಷ ವಿಧ್ಯಾರ್ಥಿ ವೇತನ ನೀಡಲಾಗುತ್ತಿದೆ. ಈಗಾಗಲೇ ರಾಜ್ಯದಲ್ಲಿ ವಿವಿಧ ಕೋರ್ಸ್ ಗಳಿಲ್ಲಿ ಓದುತ್ತಿರುವ 96 ಸಾವಿರ ಮಕ್ಕಳಿಗೆ ವಿಧ್ಯಾರ್ಥಿ ವೇತನ ನೀಡಲಾಗುತ್ತಿದೆ ಎಂದು ತಿಳಿಸಿದರು. ವಿಧ್ಯಾರ್ಥಿಗಳು ಇದರ ಸದುಪಯೋಗ ಪಡೆದು ಹೆತ್ತ ತಂದೆ, ತಾಯಿಗಳಿಗೆ ಕಲಿಸಿದ ಗುರುಗಳಿಗೆ, ಸಹಾಯ ಮಾಡಿದ ಧರ್ಮಸ್ಥಳ ಸಂಸ್ಥೆಗೆ ಕೀರ್ತಿ ತರುವಂತೆ ಓದಿ, ನಾಡು ಕಟ್ಟುವ ಕಾರ್ಯ ಮಾಡಬೇಕು ಎಂದು ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆಯು ನಾಡಿನ ಎಲಾ ಸಮುದಾಯದ ಜನರ ಪರವಾಗಿ ಕಾರ್ಯ ಮಾಡುತ್ತಿದ್ದು, ರೈತರಿಗೆ ನಮ್ಮೂರು, ನಮ್ಮ ಕೆರೆ ಯೋಜನೆಯ ಮೂಲಕ ಕೆರೆ ಹೂಳುತಗೆಯುವ ಕಾರ್ಯದ ಜತೆ ಯಾಂತ್ರಿಕಕೃತ ಬೇಸಾಯದ ಪರಿಕರಗಳನ್ನು ಒದಗಿಸುತ್ತದೆ. ಅದರಂತೆ ಜನಮಂಗಲ ಕಾರ್ಯಕ್ರಮದಲ್ಲಿ ಸಮಾಜದ ಅಶಕ್ತರಿಗೆ ಅನಾರೋಗ್ಯ ಪೀಡಿತರಿಗೆ ನೆರವು ನೀಡುವ ಉದ್ದೇಶದಿಂದ ವೀಲ್ ಚೇರ್, ವಾಕರ್, ವಾಟರ್ ಬೆಡ್, ವಾಕಿಂಗ್ ಸ್ಟಿಕ್ ಸೇರಿದಂತೆ ಅನೇಕ ಉಪಕರಣಗಳನ್ನ ಅಂದಾಜು 627 ಫಲಾನುಭವಿಗಳಿಗೆ ನೀಡಿದೆ. ಜ್ಞಾನದೀಪ ಯೋಜನೆಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದ್ದಲ್ಲಿ ಸಂಸ್ಥೆಯು ವೇತನ ನೀಡಿ ಶಿಕ್ಷಕರನ್ನು ನೇಮಕ ಮಾಡಿದೆ. ಸ್ವ ಸಹಾಯ ಸಂಘಗಳ ಮೂಲಕ ಮಹಿಳೆಯರಿಗೆ ಆರ್ಥಿಕ ನೆರವು ನೀ ಒಟ್ಟಾರೆ ಸರ್ವ ಜನಾಂಗದ ಅಭ್ಯುದಯಕ್ಕೆ ಸಂಸ್ಥೆ ಸದಾ ಸೇವೆಯನ್ನು ಸಲ್ಲಿಸುತ್ತಿದೆ ಎಂದು ತಿಳಿಸಿದರು.

ಇದೇ ಸಂಧರ್ಭದಲ್ಲಿ ತಾಲೂಕಿನ 106 ವಿಧ್ಯಾರ್ಥಿಗಳಿಗೆ ಶಿಷ್ಯ ವೇತನವನ್ನು ನೀಡಲಾಯಿತು. ಈ ಸಂಧರ್ಭದಲ್ಲಿ ಬಿಇಒ ಪದ್ಮನಾಭ ಕರಣಂ, ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಜಿಲ್ಲಾ ಜನ ಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಕಾವಲಿ ಶಿವಪ್ಪನಾಯಕ, ಸದಸ್ಯರಾದ ಹಡಗಲಿ ವೀರಭದ್ರಪ್ಪ, ಗುಂಡಪ್ಪ, ಸಿದ್ದೇಶ್, ಎಲ್.ಪವಿತ್ರ, ಧರ್ಮಸ್ಥಳ ಸಂಸ್ಥೆ ಯೋಜನಾಧಿಕಾರಿ ಸಂತೋಷ ಕುಮಾರ್, ಕಚೇರಿ ಮೇಲ್ವಿಚಾರಕರಾದ ರೇವಣ್ಣ, ಜ್ಯೋತಿ, ರೇಖಾ ಸೇರಿದಂತೆ ಅನೇಕರು ಇದ್ದರು.

# ಜೀವ ರಕ್ಷಿಸುವ ವೈದ್ಯರಿಗಿಲ್ಲವೇ ಜೀವರಕ್ಷಣೆ ?

## ಕರ್ತವ್ಯನಿರತ ವೈದ್ಯಕೀಯ ವಿಧ್ಯಾರ್ಥಿಗಳಿಗೆ, ವೈದ್ಯರಿಗೆ ರಕ್ಷಣೆ ಒದಗಿಸಲು ಆಗ್ರಹ





**ಹಂಪಿ ಟೈಮ್ಸ್ ಹೊಸಪೇಟೆ/ಕೂಡ್ಲಿಗಿ:**

ಕಲ್ಕತ್ತಾದಲ್ಲಿ ವೈದ್ಯ ವಿಧ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆಯನ್ನು ಖಂಡಿಸಿ ವಿಜಯನಗರ ಜಿಲ್ಲಾಧಿಕಾರಿ ಕಚೇರಿ ಎದುರು ವಿಜಯನಗರ ಜಿಲ್ಲೆ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಮತ್ತು ಕೆ.ಜಿ.ಎಂ.ಒ. ಹಾಗೂ ಜಿಲ್ಲಾ ಸ್ತ್ರೀ ರೋಗ ತಜ್ಞರ ಸಂಘ, ಎನ್.ಸಿ.ಸಿ. ತಂಡ, ಆರೋಗ್ಯ ನಿರೀಕ್ಷಣಾಧಿಕರಿಗಳ ಸಂಘ, ವೈದ್ಯರ ಸಂಘ, ಪ್ಯಾರಾಮೆಡಿಕಲ್ ಸಂಘ, ಶುಶ್ರೂಷಣಾಧಿಕಾರಿಗಳ ಸಂಘ. ಫಾರ್ಮಸಿ ಅಧಿಕಾರಿಗಳ ಸಂಘ ಇತರೆ ಸಂಘ ಸಂಸ್ಥೆಗಳು ಭಾಗವಹಿಸಿ ವೈದರ ಮೇಲಿನ ಅತ್ಯಾಚಾರ ಖಂಡಿಸಿ ಪ್ರತಿಭಟನೆ ಮಾಡಿದರು.

ಕೂಡ್ಲಿಗಿ ಹಾಗೂ ಕೊಟ್ಟೂರು ತಾಲೂಕು ಪದವೀಧರ ವೈದ್ಯರ ಸಂಘದ ವತಿಯಿಂದ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಎಂ. ರೇಣುಕಾ ಮೂಲಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಗೆ ಮನವಿ ಪತ್ರ ಸಲ್ಲಿಸಿದರು. ಈ ಸಂಧರ್ಭದಲ್ಲಿ ಪದವೀಧರ ವೈದ್ಯರ ಸಂಘದ ಸದಸ್ಯೆ ವೈದ್ಯೆ ಡಾ. ಪಿಕೆಎಂ ಸೌಮ್ಯಶ್ರೀ ಮಾತನಾಡಿ, ಕಲ್ಕತ್ತಾದಲ್ಲಿ ಸ್ನಾತಕೋತ್ತರ ವೈದ್ಯ ವಿಧ್ಯಾರ್ಥಿನಿಯ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಇಡೀ ದೇಶವೇ ತಲೆ ತಗ್ಗಿಸುವಂತಹ ಕೃತ್ಯವಾಗಿದೆ. ರೋಗಿಗಳ ಜೀವ ರಕ್ಷಣೆ ಮಾಡುವ ವೈದ್ಯವೃತ್ತಿಗೆ ಜೀವ ರಕ್ಷಣೆ ಇಲ್ಲವಾಗಿದೆ. ವೈದ್ಯೋ ನಾರಯಣ ಹರಿ ಎಂದೆನಿಸಿ ಕೊಳ್ಳುವ ವೈದ್ಯರಿಗೆ ಜೀವಕ್ಕೆ ತೊಂದರೆ ಎದುರಾಗಿದೆ. ಈ ಅಪಮಾನ ಮತ್ತು ಕೊಲೆಯು ಘೋರ ಕೃತ್ಯವಾಗಿದೆ. ಕರ್ನಾಟಕದ ಎಎಫ್ಐ ಮತ್ತು ಐಎಂಎ ಸಂಘಗಳು ಈ ಘಟನೆಯನ್ನು ತೀವ್ರವಾಗಿ ಖಂಡಿಸುತ್ತದೆ ಎಂದು ತಿಳಿಸಿದ ಅವರು, ಈ ಅತ್ಯಾಚಾರ ಮತ್ತು ಕೊಲೆ ಮಾಡಿದ ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ಕರ್ತವ್ಯ ನಿರತ ವೈದ್ಯಕೀಯ ವಿಧ್ಯಾರ್ಥಿಗಳಿಗೆ ಸೂಕ್ತ ರಕ್ಷಣೆಯನ್ನು ಒದಗಿಸಬೇಕು ಎಂದು ಆಗ್ರಹಿಸಿದರು.

ಈ ಸಂಧರ್ಭದಲ್ಲಿ ಪದವೀಧರ ವೈದ್ಯರ ಸಂಘದ ಸಹ ಕಾರ್ಯದರ್ಶಿ ಡಾ.ಹೇಮಂತ ಕುಮಾರ್, ಡಾ.ಎ.ಎಂ.ಗುರುರಾಜ್, ಡಾ.ಟಿ. ಎಂ.ಕೊಟ್ರೇಶ್, ಡಾ.ಬಣಕಾರ ಕೊಟ್ರೇಶ್, ಡಾ.ಮಹೇಶ್, ಡಾ. ಕನ್ಯಾಕುಮಾರಿ, ಡಾ.ರೂಪ, ಡಾ.ಶ್ರೀದೇವಿ ಸೇರಿದಂತೆ ಅನೇಕ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಇದ್ದರು.

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ನಿಸರ್ಗದ ಮೇಲೆ ಪ್ರಹಾರ ಬೇಕಿದೆ ಕಠಿಣ ಪರಿಹಾರ

ಮಾನವನಿಗೆ ಆಸೆ ಮಿತಿ ಮೀರುತ್ತಿದೆ. ಅದಕ್ಕೆ ಆತ ಏನೆಲ್ಲ ಮಾಡಬಲ್ಲ. ಎಲ್ಲವೂ ಆತನಿಗೆ ಬೇಕು. ಭೂಮಿ, ಭೂಮಿ ಮೇಲಿರುವ ಸಂಪತ್ತು, ನೀರು, ಗಾಳಿ ಎಲ್ಲವೂ ಬೇಕು. ಆದರೆ, ಪರಿಸರ ಮಾತ್ರ ಬೇಡ. ಹೀಗಾಗಿ ನಿಸರ್ಗದ ಮೇಲೆ ಆತನ ಪ್ರಹಾರ ನಿರಂತರವಾಗಿ ನಡೆಯುತ್ತಲೇ ಬಂದಿದೆ. ಆದರೆ, ಆತನಿಗೆ ಗೊತ್ತಿಲ್ಲ. ಮುಂದೊಂದು ದಿನ ತಾನು ಮಾಡುತ್ತಿರುವ ಪ್ರಹಾರದಲ್ಲಿ ತಾನೇ ಸಿಲುಕುತ್ತೇನೆಂದು. ಆಗಾಗ ನಿಸರ್ಗದ ಕೋಪಕ್ಕೆ ಈಡಾಗುತ್ತಾನಾದರೂ ಪರಿಪೂರ್ಣ ಪಾಠ ಕಲಿತಿಲ್ಲ. ಪರಿಸರದ ಮೇಲಿನ ಮಾನವನ ದಾಳಿ ನಿಯಂತ್ರಣದಲ್ಲಿಲ್ಲ. ಸರ್ಕಾರಗಳೂ ಇದರಲ್ಲಿ ಭಾಗಿಯಾಗಿವೆ. ಬೆಟ್ಟಗಳು, ಗುಡ್ಡಗಳನ್ನು ಕಡಿಯುತ್ತಿರುವ ಮನುಷ್ಯನಿಂದಾಗಿ ಪರಿಸರದಲ್ಲಿ ಅಸಮತೋಲನ ಉಂಟಾಗುತ್ತಿದೆ. ಈ ಅಸಮತೋಲನದಿಂದಾಗೇ ಪ್ರಕೃತಿ ವಿಪತ್ತು ಎದುರಿಸುವಂತಾಗಿದೆ. ಇದಕ್ಕೆ ತಾಜಾ ಉದಾಹರಣೆಯೇ ಕೇರಳದ ವಯನಾಡು. ಈ ಪ್ರದೇಶವೊಂದಷ್ಟೇ ಅಲ್ಲ. ದೇಶದ ಅನೇಕ ಪ್ರಕೃತಿ ಸೌಂದರ್ಯ ಇರುವ ಪ್ರದೇಶಗಳಲ್ಲಿ ಮನುಷ್ಯ ದಾಳಿ ಮಾಡುತ್ತಿದ್ದಾನೆ. ಮರಗಳನ್ನು ಕಡಿದು ರಸ್ತೆ ಮಾಡುತ್ತಿದ್ದಾನೆ. ಅರಣ್ಯವನ್ನು ಅಳಸಿ ರೆಸಾರ್ಟ್ ಕಟ್ಟುತ್ತಿದ್ದಾನೆ. ಪ್ರಕೃತಿ ಸೊಬಗನ್ನು ಮರೆಮಾಚಿ ಮನೆಗಳನ್ನು ನಿರ್ಮಿಸು ತ್ತಿದ್ದಾನೆ. ಆದರೆ, ಪರಿಸರಕ್ಕೂ ಜೀವ ಇದೆ ಎಂಬುದನ್ನು ಮರೆತಿದ್ದಾನೆ. ಕರ್ನಾಟಕ, ಕೇರಳ, ಗುಜರಾತ್, ಮಹಾರಾಷ್ಟ್ರ ಮತ್ತು ಗೋವಾದ ಪರಿಸರಸೂಕ್ಷ್ಮ ಪ್ರದೇಶಗಳನ್ನು ರಕ್ಷಿಸುವುದಕ್ಕಾಗೇ



ಪ್ರೊ. ಮಾಧವ ಗಾಡ್ಗೀಳ್ (2011) ಮತ್ತು ಡಾ. ಕೆ. ಕಸ್ತೂರಿರಂಗನ್ (2013) ಸಮಿತಿಗಳು ನೀಡಿದ್ದ ವರದಿಗಳನ್ನು ಅನುಷ್ಠಾನ ಗೊಳಿಸುವುದು ಎಷ್ಟು ಅವಶ್ಯ ಎಂಬುದು ಅರಣ್ಯತಟದಲ್ಲಿ ವಾಸಿಸುವ ಜನರಿಗೆ ಈಗ ಗೊತ್ತಾಗತೊಡಗಿದೆ. ಪರಿಸರ ಮೇಲೆ ಮನುಷ್ಯ ಮಾಡುವ ಹಾನಿ ಎಷ್ಟು ಬೆಲೆಬಾಳುವಂಥದು ಎಂಬುದಕ್ಕೆ ವಯನಾಡು ಸಾಕ್ಷಿಯಾಗಿ ನಿಂತಿದೆ. ವಯನಾಡು ದುರಂತದಲ್ಲಿ ಜೀವ ಕಳೆದುಕೊಂಡವರಿಗೆ ಯಾರು ಹೊಣೆ ? ಉತ್ತರ ಹುಡುಕುವುದು ಕಷ್ಟ. ಆದರೆ, ಇದಕ್ಕೆಲ್ಲ ಮನುಷ್ಯನೇ ಕಾರಣ ಎಂದು ಸ್ಪಷ್ಟವಾಗಿ ಹೇಳಬಹುದು. ವಯನಾಡು ದುರಂತದಲ್ಲಿ 300ಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದಾರೆ. ಅಷ್ಟೇ ಸಂಖ್ಯೆಯ ಜನರು ನಾಪತ್ತೆಯಾಗಿದ್ದಾರೆ. ವಯನಾಡು, ಕರ್ನಾಟಕದ ಶಿರಾಡಿ ಘಾಟ್ ಸೇರಿದಂತೆ ಹಲವೆಡೆ ಭೂಕುಸಿತ, ಗುಡ್ಡಗಳ ಕುಸಿತ ಮೇಲಿಂದಮೇಲೆ ಸಂಭವಿಸುತ್ತಿವೆ. ಇದು ಮಾನವ ತಾನು ಮಾಡಿದ ಪಾಪಕ್ಕೆ ಶಿಕ್ಷೆ ಅನುಭವಿಸುತ್ತಿದ್ದಾನೆ. ಹೀಗೇ ವರ್ಷದಿಂದ ವರ್ಷಕ್ಕೆ ಅರಣ್ಯ ಪ್ರಮಾಣ ಕಡಿಮೆಯಾಗುತ್ತಾ ಹೋದರೆ ಮುಂದೊಂದು ದಿನ ಮನುಷ್ಯ ಗಾಳಿಯನ್ನು ಎಲ್ಲಿಂದ ಸೇವಿಸುತ್ತಾನೆ ? ನೀರನ್ನು ಎಲ್ಲಿಂದ ಕುಡಿಯುತ್ತಾನೆ ? ನೆರಳನ್ನು ಎಲ್ಲಿಂದ ತರುತ್ತಾನೆ ? ಈ ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲ. ನಿಸರ್ಗವಿದ್ದರೆ ಮಾತ್ರ ಮನುಷ್ಯ ಜೀವನ. ಇಲ್ಲದಿದ್ದರೆ ಅಂತ್ಯಕಾಲ ಸಮೀಪಿಸುತ್ತಿದೆ ಎಂದೇ ಅರ್ಥ. ಪ್ರಸ್ತುತ ಜೀವನವನ್ನು ನಾವು ಇಲ್ಲಿ ನೋಡಿಕೊಳ್ಳುವುದಲ್ಲ ಮತ್ತು ಅನುಭವಿಸುವುದಲ್ಲ. ನಮ್ಮ ಮುಂದಿನ ಪೀಳಿಗೆ, ಅಂದರೆ, ನಮ್ಮ ಮಕ್ಕಳು, ಮೊಮ್ಮಕ್ಕಳು, ಅವರು ವಂಶ ಭೂಮಿ ಮೇಲೆ ಬದುಕುವುದು ಹೇಗೆ ಎಂದು ಆಲೋಚನೆ ಮಾಡುವಲ್ಲಿ ಮನುಷ್ಯ ವಿಫಲನಾಗಿದ್ದಾನೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯ ಉಪನಗರಗಳು



ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ಅಧ್ಯಯನ ಮಾಡಿ ಹಂಪಿಯ ಪ್ರದೇಶದಲ್ಲಿ ನಿಂತು ವಿದೇಶಿ ಪ್ರವಾಸಿಗರು ಬರೆದಿರುವ ದಾಖಲೆಗಳನ್ನು ಒಮ್ಮೆ ಜ್ಞಾಪಿಸಿಕೊಂಡರೆ ಹಂಪಿ ಎಂಥಹ ಅದ್ಭುತ ನಗರವಾಗಿತ್ತು ಎಂಬುದು ಅರಿವಿಗೆ ಬರುತ್ತದೆ. ಹೌದು ವಿಜಯನಗರ ಸಾಮ್ರಾಜ್ಯದ ಸಂಗಮ ವಂಶದ ದೊರೆಗಳು ವಿಶಾಲ ಸಾಮ್ರಾಜ್ಯಕ್ಕೆ ಅಸ್ತಿ ಭಾರವನ್ನು ಹಾಕಿಕೊಟ್ಟವರು. ಇವರು ನಗರ ನಿರ್ಮಾಣದ ಕನಸು ಕಂಡು ಅದನ್ನು ನಿರ್ಮಿಸಲು ಮೊದಲ ಬಾರಿಗೆ ಅಸ್ತಿಭಾರವನ್ನು ಹಾಕಿದ ಪ್ರಥಮ ಅರಸನೆಂದರೆ ಇಮ್ಮಡಿ ಹರಿಹರ. ಹೌದು ವಿಜಯನಗರದ ವಿಶಾಲ ಸಾಮ್ರಾಜ್ಯದ ಸ್ಥಾಪನೆಗೆ ಪಣತೊಟ್ಟು ಆ ನಿಟ್ಟಿನಲ್ಲಿ ಸತತ ಪ್ರಯತ್ನ ನಡೆಸಿ ನಗರ ನಿರ್ಮಾಣವನ್ನು ಮಾಡಿದವನೆಂದರೆ ಇಮ್ಮಡಿ ಹರಿಹರ. ಇಮ್ಮಡಿ ಹರಿಹರನ ನಂತರ ಬಂದ ಇಮ್ಮಡಿ ದೇವರಾಯ, ಪ್ರೌಢದೇವರಾಯ ಮೊದಲಾದವರು ವ್ಯವಸ್ಥಿತವಾದ ಹಾಗೂ ದೂರ ದೃಷ್ಟಿಯ ನಗರ ನಿರ್ಮಾಣ ಕಾರ್ಯವನ್ನು ಮುಂದುವರಿಸಿದವರು. ಮುಂದೆ ತುಳು ವಂಶದ ಕೃಷ್ಣದೇವರಾಯನ ಆಡಳಿತದಲ್ಲಿ ವಿಜಯನಗರ ಮಹನ್ನೋತವಾದ ಸ್ಥಾನವನ್ನು ಪಡೆದಿತ್ತು. ಇದಕ್ಕೆ ಮೂಲ ಕಾರಣಿಭೂತರಾದವರು ಸಂಗಮ ವಂಶದ ಅರಸರುಗಳು.

ಕೃಷ್ಣದೇವರಾಯರ ಅರಸನಿಗಿಂತ ಮೊದಲೇ ವಿಜಯನಗರವು ಅತ್ಯಂತ ವ್ಯವಸ್ಥಿತವಾದ ಮತ್ತು ವೈಭವೋಪೇತ ನಗರವಾಗಿತ್ತು ಎಂಬುದಕ್ಕೆ ಪ್ರೌಢದೇವರಾಯನ ಆಡಳಿತಕಾಲದಲ್ಲಿ ಅಂದರೆ 1442 ರಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಗೆ ಭೇಟಿ ಇತ್ತ ಅಬ್ದುಲ್ ರಜಾಕ್ ಎಂಬ ಪರ್ಶಿಯಾ ದೇಶದ ಪ್ರಸಿದ್ಧಿ ಪ್ರವಾಸಿಗ ಬರೆದ ದಾಖಲೆಗಳೆ ಸಾಕ್ಷಿಯಾಗಿವೆ. ವಿಜಯ ನಗರದಂತ ನಗರವನ್ನು ಕಣ್ಣು ಕಂಡಿಲ್ಲ ಕಿವಿ ಕೇಳಿಲ್ಲ ಈ ನಗರವನ್ನು ಹೇಗೆ ನಿರ್ಮಿಸಿದ್ದಾರೆಂದರೆ ಏಳು ದುರ್ಗಗಳು ಏಳುಕೋಟೆಗಳು ಒಂದನ್ನೊಂದು ಆವರಿಸಿಕೊಂಡಿವೆ ಎಂದಿದ್ದಾನೆ. ಅಂದರೆ ಪ್ರೌಢ ದೇವರಾಯನ ಕಾಲದಲ್ಲೇ ವ್ಯವಸ್ಥಿತವಾದ ನಗರ ನಿರ್ಮಾಣಗೊಂಡಿದ್ದನ್ನು ಅರಿಯಬಹುದಾಗಿದೆ. ಹೀಗೆ ವಿಜಯನಗರದ ಸಾಮ್ರಾಜ್ಯದ ರಾಜಧಾನಿ ವಿಜಯನಗರ ಅಥವಾ ಹಂಪಿಯ ನಗರ ನಿರ್ಮಾಣಕ್ಕೆ ಅಸ್ತಿಭಾರ ಹಾಕಿದ್ದು ಅಂದರೆ ಶಂಕುಸ್ಥಾಪನೆ ಮಾಡಿದ್ದವರು ಸಂಗಮ ವಂಶದ ದೊರೆಗಳು ನಂತರ ಸಾಳವ, ಅರವೀಡು, ತುಳು ವಂಶದ ರಾಜರ ಕಾಲದಲ್ಲಿ ಅದು ಮುಂದುವರೆದಿದೆ. ಆದರೆ ತುಳು ವಂಶದ ಕೃಷ್ಣದೇವ ರಾಯ ಹಾಗೂ ಅಚ್ಚುತ ದೇವರಾಯನ ಕಾಲದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ವಿಜಯನಗರ ಸಾಮ್ರಾಜ್ಯ ವಿಸ್ತಾರಗೊಂಡು ರಾಜಧಾನಿಯ ಸುತ್ತ ಉಪನ ಗರಗಳು ನಿರ್ಮಾಣ ಗೊಂಡವು.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489
Scan For Digital Colourful
HAMPI TIMES E-paper

ರಾಜಧಾನಿ ಹಂಪಿಯಲ್ಲಿ ಅಭಿವೃದ್ಧಿ ಚಟುವಟಿಕೆಗಳು ಹೆಚ್ಚಿನ ಮಟ್ಟದಲ್ಲಿ ಪಡೆದಿದ್ದರಿಂದ ಪ್ರಮುಖವಾಗಿ ಹಂಪಿಯಲ್ಲಿ ಜನಸಂದಣಿ ಹೆಚ್ಚಾದ ಕಾರಣ ಸಹಜವಾಗಿ ವ್ಯಾಪಾರ ವಹಿವಾಟುಗಳು ತೀವ್ರಗೊಂಡಿದ್ದು ವ್ಯವಸ್ಥಿತ ವ್ಯಾಪಾರ ನಿರ್ವಹಣೆಗಾಗಿ ಪ್ರತ್ಯೇಕವಾದ ಉಪನಗರ ಅಥವಾ ಮಾರುಕಟ್ಟೆಗಳನ್ನು ನಿರ್ಮಾಣ ಮಾಡಲಾಯಿತು. ಅವುಗಳಲ್ಲಿ ಪ್ರಮುಖವಾಗಿದ್ದವು ವಿರುಪಾಕ್ಷಪುರ, ಕೃಷ್ಣಾಪುರ, ಅಚ್ಚುತಾಪುರ, ವಿಠಲಪುರ, ಕಮಲಾಪುರ, ವರದರಾಜಮ್ಮನ ಪಟ್ಟಣ ಕಡೆರಾಮಪುರ, ಸಾಲೆ ತಿರುಮಲ ಮಹಾರಾಯಪುರ, ನಾಗಲಾದೇವಿಪುರ, ತಿರುಮಲಾದೇವಿ ಪಟ್ಟಣ, ಸೋಮಲಾಪುರ, ಹೀಗೆ ಹಲವಾರು ಪ್ರಮುಖವಾದ ಉಪನಗರಗಳು, ಮಾರುಕಟ್ಟೆಗಳು ನಿರ್ಮಾಣಗೊಂಡ್ಡದ್ದವು. ವಿಶೇಷವಾಗಿ ಪ್ರೌಢ ದೇವರಾಯನ ಕಾಲದಲ್ಲಿ ಸಾಲ ಮಂಟಪಗಳನ್ನು ನಿರ್ಮಿಸಿ ವ್ಯಾಪಾರಕ್ಕಾಗಿ ಅನುವು ಮಾಡಿಕೊಡಲಾಯಿತು. ಈ ಮಾರುಕಟ್ಟೆಗಳಲ್ಲಿ ವ್ಯಾಪಾರ ವಹಿವಾಟುಗಳ ಜೊತೆಗೆ ಧಾರ್ಮಿಕ ಆಚರಣೆಗಳು ಸಹ ಆ ದೇವಸ್ಥಾನದಲ್ಲಿ ಸುತ್ತಲೂ ನಡೆದುಕೊಂಡು ಬಂದಿದ್ದವು.

ವಿರೂಪಾಕ್ಷದೇವಾಲಯದ ಪೂರ್ವ ಗೋಪುರದ ಮುಂಭಾಗದಿಂದ ಎದುರು ಬಸವಣ್ಣ ನವರಿಗೆ ಇರುವ ಈಗಿನ ರಸ್ತೆ ವಿರೂಪಾಕ್ಷ ಬಜಾರ್. ವಿರುಪಾಕ್ಷ ದೇವಸ್ಥಾನದಿಂದ ಎದುರು ಬಸವನ ಮಂಟದವರಿಗೆ ಎರಡು ಬದಿಗಳಲ್ಲಿ ಸಾಲು ಮಂಟಪಗಳನ್ನು ನಿರ್ಮಿಸಲಾಗಿದೆ ಇದನ್ನು ವಿರೂಪಾಕ್ಷಪುರ ಪಂಪಾಪುರ ಪಂಪಾರತಭೀತಿ ವಿರೂಪಾಕ್ಷರ ತಬೇದಿ ಹಂಪೆಯ ತೇರುಬೀದಿ ಹಂಪೆಯ ಬಜಾರ್ ಎಂಬ ಹೆಸರುಗಳಿಂದ ಕರೆಯಲಾಗುತ್ತದೆ. ಪ್ರೌಢದೇವರಾಯ ಈ ಬಜಾರವನ್ನು ಸುಂದರವಾಗಿ ನಿರ್ಮಿಸಿರುವರು ಎಂಬುದು ತಿಳಿದು ಬರುತ್ತದೆ. ಇಲ್ಲಿ ವೀರಶೈವ ಮಠಗಳು ಈ ಮಂಟಪಗಳಲ್ಲಿದ್ದವು. ಈ ಧಾರ್ಮಿಕ ಆಚರಣೆಗಳ ಜೊತೆಗೆ ವ್ಯಾಪಾರ ಕೇಂದ್ರವು ಆಗಿತ್ತು. ಆದರೆ ಇದು ವಿಶೇಷವಾಗಿ ವಿರೂಪಾಕ್ಷ ದೇವಾಲಯಕ್ಕೆ ಅವಶ್ಯವಿರುವ ವಸ್ತುಗಳನ್ನು ಮಾರಾಟ ಮಾಡುವ ಕೇಂದ್ರವಾಗಿತ್ತು ಎನ್ನಲಾಗಿದೆ ಹಾಗೆ ಅವಶ್ಯವಾದ ಆಹಾರ ವಸ್ತುಗಳನ್ನು ಸಹ ಈ ಬಜಾರದಲ್ಲಿ ಅಥವಾ ಉಪನಗರದಲ್ಲಿ ಮಾರಾಟ ಮಾಡಲಾಗುತ್ತಿತ್ತಂತೆ. ಇಲ್ಲಿನ ಸಾಲು ಮಂಟಪಗಳು ವ್ಯಾಪಾರದ ಮಳಿಗೆಗಳು ಆಗಿದ್ದವು ಎನ್ನುತ್ತಾರೆ. ವಿಜಯನಗರ ಉಪನಗರಗಳಲ್ಲಿ ಅತಿ ಪ್ರಾಚೀನ ಹಂಪೆಯ ಪ್ರಮುಖವಾದ ಮತ್ತು ಪ್ರತಿಷ್ಠಿತ ಉಪನಗರವಾಗಿದೆ.

ಕೃಷ್ಣದೇವಸ್ಥಾನದ ಸುತ್ತಲಿನ ಪ್ರದೇಶವನ್ನು ಕೃಷ್ಣಾಪುರ ಎಂದು ಕರೆಯಲಾಗಿದೆ. ಹಂಪಿಯಲ್ಲಿ ಸ್ಥಾಪನೆಗೊಂಡ ಮೊದಲ ವೈಷ್ಣವಪುರ ಎನ್ನಲಾಗಿದೆ., ಆಗಿನ ಪ್ರಮುಖ ದೇವಸ್ಥಾನಗಳಲ್ಲಿ ಕೃಷ್ಣ ದೇವಸ್ಥಾನ ಪ್ರಮುಖವಾದದಾಗಿತ್ತು. ಈ ದೇವಸ್ಥಾನದ ಸುತ್ತಲೂ ಕೃಷ್ಣಾಪುರ ಉಪನಗರ ನಿರ್ಮಾಣಗೊಂಡಿತ್ತು. ಈ ಕೃಷ್ಣ ದೇವಾಲಯದ ಮುಂದಿರುವ ವಿಶಾಲವಾದ ಪ್ರದೇಶದಲ್ಲಿ ಎರಡು ಸಾಲಿನ ಮಂಟಪಗಳಿಂದ ಕೂಡಿದ ಪ್ರದೇಶವೇ ಕೃಷ್ಣಪುರ ಉಪನಗರದ ಹಾಗೂ ಪ್ರಮುಖವಾದ ಮಾರುಕಟ್ಟೆಯು ಆಗಿದೆ. ಈ ಮಾರುಕಟ್ಟೆಯಲ್ಲಿ ದವಸ ಧಾನ್ಯಗಳನ್ನು ಮಾರಾಟ ಮಾಡಲಾಗುತ್ತಿತ್ತು. ಈ ಬಜಾರದ ಮಾರುಕಟ್ಟೆಯಿಂದ ದೇವಸ್ಥಾನಕ್ಕೆ 800 ಗಧಾನ್ಯಗಳ ಆದಾಯ ಬರುತ್ತಿತ್ತು ಎನ್ನಲಾಗಿದೆ. ಇದನ್ನು ಕೃಷ್ಣ ದೇವಸ್ಥಾನದ ಬಳಕೆಗೆ ಬಳಸಲಾಗಿದೆ. ಈ ಮಾರುಕಟ್ಟೆಯಲ್ಲಿ ಅಕ್ಕಿ, ಗೋಧಿ ಅವರೇ ಹೆಸರು ಬೇಳೆ ಉರುಳಿ ಮೊದಲಾದ ಧಾನ್ಯಗಳು ಸಮೃದ್ಧಿಯಾಗಿ ಮಾರಾಟವಾಗುತ್ತಿದ್ದವು ಎನ್ನಲಾಗಿದೆ. ಈ ದವಸ ಧಾನ್ಯಗಳನ್ನು ಹೇರಿಕೊಂಡು ಬರುತ್ತಿದ್ದ ಎತ್ತಿನ ಗಾಡಿಗಳು ಬೀದಿಯ ತುಂಬಾ ತುಂಬಿರುತ್ತಿದ್ದವು ಎಂದು ಭೇಟಿ ನೀಡಿದ ವಿದೇಶಿ ಪ್ರವಾಸಿಗ ಢಮಿಂಗೋಪಾಯಸ್ ದಾಖಲಿಸಿದ್ದಾನೆ. ವಿಜಯನಗರದ ಪ್ರಮುಖ ಮಾರುಕಟ್ಟೆಗಳಲ್ಲಿ ಪ್ರಮುಖವಾದ ಮಾರುಕಟ್ಟೆಯಾಗಿ ಆರ್ಥಿಕ ಧಾರ್ಮಿಕ ಚಟುವಟಿಕೆಗಳಲ್ಲಿ ಇದು ಪ್ರಮುಖ ಪಾತ್ರ ವಹಿಸಿತ್ತು ಎನ್ನಲಾಗಿ ವಿರೂಪಾಕ್ಷ ಬಜಾರ ಪೂರ್ವದಿಂದ ಎದುರು ಬಸವ ಮಂಟಪದ ಮೆಟ್ಟಿಲುಗಳನ್ ಏರಿ ಆ ಬದಿಗೆ ಇಳಿದರೆ ಸಿಗುವುದೇ ಅಚ್ಚುತಾಪುರ ಉಪನಗರ ಅಥವಾ ಮಾರುಕಟ್ಟೆ. ಇದು ಬೃಹತ್ ದೇವಾಲಯವಾಗಿದೆ, ದೇವಸ್ಥಾನದಿಂದ ತುಂಗಭದ್ರ ನದಿಯವರಿಗೆ ವಿಶಾಲವಾದ ಮಾರುಕಟ್ಟೆ ಪ್ರದೇಶವನ್ನು ಇದು ಹೊಂದಿದೆ ಇದನ್ನು ಅಚ್ಚುತಾಪುರ ಪೇಟೆ ತಿರುವೆಂಗಗಳನಾಥ ಬೇದಿ ಎಂಬ ಹೆಸರುಗಳಿಂದ ಕರೆಯುತ್ತಾಗುತ್ತದೆ ಇದನ್ನು ಸೂಳೆಬಜಾರು ಎಂದು ಸಹ ಜನಸಾಮಾನ್ಯರು ಕರೆಯುವ ರೂಡಿಯಲ್ಲಿದೆ. ತಿರುಮಲ ರಾಜ ಅಚ್ಯುತರಾಯನ ಹೆಸರಿನಲ್ಲಿ ಈ ಪೇಟೆಯನ್ನು ಕಟ್ಟಿಸಿದ್ದರಿಂದ ಇದಕ್ಕೆ ಅಚ್ಯುತಾರಾಯ ಪೇಟೆ ಎಂದು ಕರೆಯಲಾಗಿದೆ. ಈ ಮಾರುಕಟ್ಟೆಯು ವಾರಕ್ಕೊಮ್ಮೆ ಸಂತೆಯು ನಡೆಯುತ್ತಿದ್ದು ಇಲ್ಲಿ ಎಲ್ಲ ವಿಧದ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿತ್ತು ಎನ್ನಲಾಗಿದೆ. ಇದನು ದಾಟಿದರೆ ಬರುವುದೆ ವಿಠಾಲಾಪುರ.

**ನಾಗಲಾಪುರ – ತಿರುಮಲಾದೇವಿಪುರ**

ಕೃಷ್ಣದೇವರಾಯ ತನ್ನ ತಾಯಿ ಮತ್ತು ಪತ್ನಿಯ ನೆನಪಿಗಾಗಿ ನಾಗಲಾದೇವಿಪುರ ಮತ್ತು ತಿರುಮಲಾದೇವಿ ಪಟ್ಟಣವನ್ನು ಕ್ರಿಸ್ತಶಕ 1513ರ ವೇಳೆಗೆ ನಿರ್ಮಿಸಿದ್ದ ಎನ್ನಲಾಗಿದೆ. ತಾಯಿ ನಾಗಲಾದೇವಿಯ ಹೆಸರಿನಲ್ಲಿ ನಾಗಲಾದೇವಿಪುರವನ್ನು ನಿರ್ಮಿಸಲಾಗಿತ್ತು. ಈಗಿನ ಹೊಸಪೇಟೆ ತಾಲೂಕಿನ ನಾಗೇನಹಳ್ಳಿಯೇ ಅಂದಿನ ನಾಗಲಾದೇವಿಪುರ. ಈಗಿನ ಹೊಸಪೇಟೆಯ ಸಣ್ಣಕ್ಕಿ ವೀರಭದ್ರೇಶ್ವರ ದೇವಸ್ಥಾನ ಮತ್ತು ವಡಕರಾಯನ ದೇವಸ್ಥಾನದ ಪ್ರದೇಶವನ್ನು ತಿರುಮಲದೇವಿ ಪಟ್ಟಣ ಎಂದು ಗುರುತಿಸಲಾಗಿದೆ ಎನ್ನುತ್ತಾರೆ. ಸಾಲೆ ತಿರುಮಲ ಮಹಾರಾಯಪುರ ಅಂದರೆ ಈಗಿನ ಅನಂತಶೆಯನ ಗುಡಿಯ ಪುರವನ್ನು ನಿರ್ಮಿಸಲಾಯಿತು. ಕಡೆ ರಾಮಪುರ ಅಂದರೆ ಈಗಿನ ಕಡ್ಡಿ ರಾಂಪುರ ವರದರಾಜಮ್ಮನ ಪಟ್ಟಣ ಅಂದರೆ ಪೆನಕೊಂಡ ಬಾಗಿಲ ಹತ್ತಿರ ಹೀಗೆ ಸೋಮಲಾಪುರ ಹಲವಾರು ಉಪನಗರಗಳನ್ನು ಅಂದಿನ ರಾಜರುಗಳು ನಿರ್ಮಿಸಿದ್ದಾರೆ .ವಿಜಯನಗರದ ನಗರ ನಿರ್ಮಾಪಕರುಗಳು ರಾಜಧಾನಿ ವೇಗವಾಗಿ ಬೆಳೆಯುವುದನ್ನು ತಡೆಯಲು ಅದಕ್ಕೆ ಉಪನಗರಗಳನ್ನು ನಿರ್ಮಿಸಿದ್ದರು ಎನ್ನುವುದು ತಿಳಿದು ಬರುತ್ತದೆ.



# ನ್ಯಾಯಾಧಿಪತಿ, ಕರ್ಮಫಲದಾತ ಶನೇಶ್ವರ

**ಮೊದಲ ಪುಟದಿಂದ**

ಗುರುಪಾದದೇವರಮಠದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಹನಸಿಯ ಜಗದ್ಗುರು ಶ್ರೀ ಶಂಕರ ಶಿವಾಚಾರ್ಯ ಸ್ವಾಮಿಗಳು, ಬುಕ್ಕಸಾಗರದದ ಶಿವಾಚಾರ್ಯ ಮಹಾಸ್ವಾಮಿಗಳು, ಹರಪನಹಳ್ಳಿ ತೆಗ್ಗಿನ ಮಠದ ವರಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳು, ಎಮ್ಮಿಗನೂರು ಶ್ರೀ ಹಂಪಿ ಸಾವಿರ ದೇವರಮಠದ ವರಸದ್ಯೋಜಾತ ಶಿವಾ ಚಾರ್ಯ ಮಹಾಸ್ವಾಮಿಗಳು, ಹಗರಿ ಬೊಮ್ಮನಹಳ್ಳಿಯ ಶ್ರೀ ಹಾಲಸಿದ್ದೇಶ್ವರ ಸ್ವಾಮಿಗಳು, ಕೊಟ್ಟೂರು ಚಾನುಕೋಟಿ ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ನಿವೃತ್ತ ಉಪನ್ಯಾಸಕ ಡಾ.ಚಂದ್ರಶೇಖರ ಶಾಸ್ತ್ರಿ, ಸಮಾಜ ಸೇವಕ ಕೆ.ಬಿ.ಶ್ರೀನಿವಾಸರೆಡ್ಡಿ ಉಪಸ್ಥಿತರಿದ್ದರು.

ವಾರ್ಷಿಕೋತ್ಸವದ ನಿಮಿತ್ತ ಬೆಳಿಗ್ಗೆ ಸುಮಂಗಲೆಯರು ಮಂಗಳವಾದ್ಯಗಳೊಂದಿಗೆ ತುಂಗಾಭದ್ರಾ ನದಿಯ ಹಿನ್ನೀರಿಗೆ ತೆರಳಿ ಗಂಗಾಪೂಜೆ ನೆರವೇರಿಸಿದರು. ನಂತರ ದೇವಸ್ಥಾನದಲ್ಲಿ ಶ್ರೀ ಶನಿದೇವರಿಗೆ ತೈಲಾಭಿಷೇಕ, ಪಮಚಾಮೃತ ಅಭಿಷೇಕ, ಬೆಳ್ಳಿ ಕವಚದೊಂದಿಗೆ ಪುಷ್ಪಲಂಕಾರ ನೆರವೇರಿಸಲಾಯಿತು. ದೇವಾಲಯದೊಳಗಿರುವ ಶ್ರೀ ವಿಘ್ನೇಶ್ವರ, ಜ್ಯೇಷ್ಠಾದೇವಿ, ಕಾಕವಾಹನ, ಶ್ರೀಶಾಂತ ಲಿಂಗೇಶ್ವರ, ಶ್ರೀಶಾಂಭವಿಮಥಾ, ನಂದಿ, ನವಗ್ರಹ, ಬನ್ನಿಮಹಾಂಕಾಳಿ ದೇವಿಗೆ ಪೂಜೆ ಸಲ್ಲಿಸಲಾಯಿತು. ಅರ್ಚಕ ಶಂಭುಲಿಂಗ ಹಿರೇಮಠ ವೃಂದದಿಂದ ಆಗಮ ಕ್ರಿಯೆಗಳು ಜರುಗಿದವು. ಗಣಿಮಾಲೀಕರಾದ ಗೊಗ್ಗ ಜಗನ್ಮಾತಮ್ಮ ಗೊಗ್ಗಶರಭಯ್ಯನವರಿಂದ ಹೋಮ ಮತ್ತು ಪ್ರಸಾದ ಸೇವೆ ನಡೆಯಿತು. ನಾನಾ ಜಿಲ್ಲೆಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದರ್ಶನ ಪಡೆದು, ಪ್ರಸಾದ ಸ್ವೀಕರಿಸಿದರು. ನಂದಿಬೇವೂರಿನ ಶ್ರೀ ಬಸವೇಶ್ವರ ನಂದಿಕೋಲು, ಸಮಾಳ, ಜಾನಪದ ಕಲಾ ಸೇವಾ ಸಂಘ ಸೇವೆ ಸಲ್ಲಿಸಿತು. ದೇವಸ್ಥಾನ ಸಮಿತಿ ಅಧ್ಯಕ್ಷ ಬಿ. ಹಾಲನಗೌಡ, ಕಾರ್ಯದರ್ಶಿ ಅಂಜಿನಪ್ಪ ಸೇರಿದಂತೆ ಸಮಿತಿ ಸದಸ್ಯರು ವಾರ್ಷಿಕೋತ್ಸವನ್ನು ಅರ್ಥಪೂರ್ಣವಾಗಿ ಆಚರಿಸುವಲ್ಲಿ ಶ್ರಮಿಸಿದರು.



**ಕವಿ ಮನಸು**

## ಹೇಗೆ ಸುಮ್ಮನಿರಲಿ?



ಮೇಘವರ್ಣನೆ ಏಕೆ ಈತರ
ಕಾಡುತಿರುವೆಯೊ ಕಂದನೇ
ನಾರಿಮಣಿಗಳು ದೂರು ತಂದಿರೆ
ಹೇಗೆ ಇರುವುದು ಸುಮ್ಮನೆ

ಗಡಿಗೆ ಒಡೆಯುವೆ ಬೆಣ್ಣೆ ಕದಿಯುವೆ
ಎಂಬ ಮಾತನು ನುಡಿವರು
ಜಳಕಕಿಳಿದಿರೆ ತರುಣೆ ನದಿಯಲಿ
ಸೀರೆ ಕದಿಯುವೆ ಎನುವರು

ವಿಷದ ಉರಗವ ಹಿಡಿದು ಬಾಗಿಸಿ
ಶಿರದಿ ಮಾಡಿದೆ ನರ್ತನ
ಒಂದು ಬೆರಳಲಿ ಗಿರಿಯನೆತ್ತಿದೆ
ಎಂದು ಕೊಟ್ಟರು ದೂರನಾ

ಎತ್ತಿಕೊಳ್ಳುತ ಮೊಲೆಯನುಣಿಸಿರೆ
ಸತ್ತು ಬಿದ್ದಳು ಪೂತನಿ
ಮರದ ಕಾಂಡಕೆ ಕಟ್ಟಿ ಬಿಗಿದರೆ
ಸರಿಸಿ ಬಿಟ್ಟೆಯ ಮರವನೇ

ಮಾತೆ ಮಾತಿಗೆ ನುಡಿಯನಾಡದೆ
ಮನದೆ ನಗುವನು ಮಾಧವ
ಕಪಟ ನಾಟಕ ಸೂತ್ರಧಾರಿಯೆ
ಹರಸು ನಮ್ಮನು ಕೇಶವ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ವರವ ಕೊಡು ತಾಯಿ

ನಮಿಸುವೆವು ವರ ಮಹಾಲಕ್ಷ್ಮಿಗೆ
ಬೇಡಿದ ವರ ನೀಡುವ ಸಿರಿದೇವಿಗೆ
ಸೇವೆಯ ಸ್ವೀಕರಿಸಿ ಕೃಪೆತೋರಿ ಸಲಹು
ನಿನ್ನಯ ದಯೆಯೇ ನಾಳಿನ ಹೊಳಹು

ಕರದಿ ಕಮಲವ ಪಿಡಿದು
ಹರಿಯ ಹೃದಯದಿ ಸ್ಥಾನ ಪಡೆದು
ಪೊರೆಯುವ ಶರಣಾಗತ ವತ್ಸಲೆ
ಹೂವು ಹಣ್ಣುಗಳ ನೈವೇದ್ಯ ಮಾಡುವೆ

ಭಕ್ತಿ ಭಾವದಿಂದ ಅಲಂಕರಿಸಿ ನಮಿಸುವೆ
ತೊಲಗಿಸು ತಾಯಿ ಬಾಳಿನ ಕತ್ತಲೆ
ಧನಧಾನ್ಯ ಸಮೃದ್ಧಿಯ ನೀಡು
ವರವ ಕೊಡು ತಾಯಿ ಕಾಪಾಡು

ನಿನ್ನ ಕೃಪೆಯಿರಲು ಬಾಳು ಸಂಪನ್ನವೆಂದೂ
ಲಕುಮಿಯ ನಾಮಸ್ಮರಣೆ ಜೊತೆಗಿರಲಿ
ಎಂದೆಂದೂ
ದಯೆತೋರಿ ಪೊರೆ ನಮ್ಮನು ಅನುದಿನವು
ನಿನ್ನಯ ಅಭಯಹಸ್ತವಿರಲಿ ಅನು ಕ್ಷಣವು

– ಚೇತನ ಭಾರ್ಗವ ಬೆಂಗಳೂರು

# ಈ ಸಾವು ನ್ಯಾಯವೇ?

## ಪಶ್ಚಿಮ ಬಂಗಾಳದ ವೈದ್ಯಕೀಯ ವಿದ್ಯಾರ್ಥಿನಿಯ ಬರ್ಬರ ಅತ್ಯಾಚಾರ ಮತ್ತು ಹತ್ಯೆಯನ್ನು ಖಂಡಿಸಿ

ತನ್ನ ರಾತ್ರಿ ಪಾಳಿಯ ಎಲ್ಲ ಕೆಲಸಗಳನ್ನು ಪೂರೈಸಿ ತನ್ನ ಜೊತೆ ಓದುತ್ತಿರುವ ಇತರ ಇಂಟರ್ನ್ ಸ್ನೇಹಿತರೊಂದಿಗೆ ರಾತ್ರಿ 2 ಗಂಟೆಗೆ ಊಟ ಮಾಡಿ ಸೆಮಿನಾರ್ ಹಾಲ್ನಲ್ಲಿ ಓದಲು ಕುಳಿತುಕೊಂಡ ಆ ಮಹಿಳಾ ವೈದ್ಯೆಗೆ ಅದು ತನ್ನ ಜೀವನದ ಅಂತಿಮ ರಾತ್ರಿ ಎಂಬ ಅರಿವೇ ಇರಲಿಲ್ಲ. ರೆಸ್ಪಿರೇಟರಿ ಮೆಡಿಸಿನ್ ನಲ್ಲಿ ಸ್ನಾತಕೋತ್ತರ ಪಿಜಿ ಮಾಡುತ್ತಿರುವ ಆಕೆ ಓದುತ್ತಾ ಕುಳಿತುಕೊಂಡ ಸ್ಥಳದಲ್ಲಿಯೇ ತುಸು ನಿದ್ದೆಗೆ ಜಾರಿದಳು.

ಕಳೆದ ಆರೇಳು ವರ್ಷಗಳಿಂದ ಅಲ್ಲಿಯೇ ಕಾರ್ಯ ನಿರ್ವಹಿಸುತ್ತಿದ್ದ ಪೊಲೀಸ್ ಅಧಿಕಾರಿಯೊಬ್ಬ ತನ್ನ ಸಂಬಂಧಿಯೊಬ್ಬರನ್ನು ಅಲ್ಲಿ ದಾಖಲಿಸಿದ್ದು ಅವರನ್ನು ಭೇಟಿಯಾಗಲು ಬಂದನು. ಸೆಮಿನಾರ್ ಹಾಲ್ನಲ್ಲಿ ಆಗ ತಾನೆ ನಿದ್ದೆಗೆ ಜಾರಿದ್ದ ವೈದ್ಯಕೀಯ ವಿದ್ಯಾರ್ಥಿನಿಯನ್ನು ಕಂಡು ಆತನಲ್ಲಿನ ರಾಕ್ಷಸಿ ಪ್ರವೃತ್ತಿ ಎಚ್ಚೆತ್ತು ಆಕೆಯ ಮೇಲೆ ಬಲಾತ್ಕಾರ ಎಸಗಿದನು. ಆತನನ್ನು ಬಹಳಷ್ಟು ವಿರೋಧಿಸಿದ ಆಕೆಯ ಕನ್ನಡಕವನ್ನು ಒಡೆದು ಹಾಕಿದ ಆತ ಆಕೆಯ ಮೇಲೆ ಬರ್ಬರವಾಗಿ ದಾಳಿ ಮಾಡಿದನು. ತುಸು ಹೆಚ್ಚಾಗಿಯೇ ವಿರೋಧಿಸಿದ ಆಕೆಯ ಎರಡು ಕೈಗಳನ್ನು ಬಿಗಿದ ಆತ ಕುತ್ತಿಗೆಯ ಮೇಲೆ ಕೈ ಇಟ್ಟು ಉಸಿರುಗಟ್ಟಿಸಲು ಪ್ರಯತ್ನಿಸಿದ. ಅಂತಿಮವಾಗಿ ಆಕೆಯನ್ನು ಅಮಾನುಷವಾಗಿ ಅತ್ಯಾಚಾರ ಮಾಡಿದ ಆತ ಅಲ್ಲಿಂದ ಹೊರ ಬಿದ್ದನು.

ಮರುದಿನ ಅಗಸ್ಟ್ 10 ರ ಮುಂಜಾನೆ 7ರ ಸಮಯ. ನಿಮ್ಮ ಮಗಳ ಆರೋಗ್ಯ ಸರಿ ಇಲ್ಲ ತುಸು ಬೇಗನೆ ಬನ್ನಿ ಎಂದು ಪೊಲೀಸರು ಆ ವೈದ್ಯಕೀಯ ವಿದ್ಯಾರ್ಥಿನಿಯ ಪಾಲಕರಿಗೆ ಕರೆ ಮಾಡಿ ಹೇಳಿದರು. ಕೂಡಲೇ ತಮ್ಮ ಮಗಳು ಓದುತ್ತಿದ್ದ ಮೆಡಿಕಲ್ ಕಾಲೇಜಿಗೆ ಧಾವಿಸಿ ಬಂದ ಪಾಲಕರನ್ನು ಸುಮಾರು 3 ಗಂಟೆಗಳ ಕಾಲ ಕಾಯಿಸಿದ ಪೊಲೀಸರು ಅಂತಿಮವಾಗಿ ಆಕೆ ಮಾನಸಿಕ ವಿಕೃತಿಯಿಂದ ಬಳಲುತ್ತಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಹೇಳಿದರು.

ನೆನ್ನೆ ತಾನೆ 36 ಗಂಟೆಗಳ ರಾತ್ರಿ ಡ್ಯೂಟಿಗೆ ಬಂದ ಸ್ನಾತಕೋತ್ತರ ವೈದ್ಯಕೀಯ ಪದವಿ ಓದುತ್ತಿರುವ 31 ರ ಯುವತಿ ರಾತೋ ರಾತ್ರಿ ಅದು ಹೇಗೆ ಮಾನಸಿಕವಾಗಿ ಅಸ್ವಸ್ಥವಾದಳು? ಮೂರು ನಾಲ್ಕು ಗಂಟೆಗಳ ಆಕ್ರಂದನ, ಬೇಡುವಿಕೆಗಳ ನಂತರ ಅಂತಿಮವಾಗಿ ಪಾಲಕರಿಗೆ ಮಗಳನ್ನು ನೋಡಲು ಅವಕಾಶ ದೊರೆಯಿತು.

ಹಾಗೆ ಮಗಳನ್ನು ನೋಡಲು ಬಂದ ತಂದೆ ಬಹುಶಹ ಜೀವನದಲ್ಲಿ ಎಂದೂ ಮರೆಯಲಾರದ ದೃಶ್ಯ ಅದಾಗಿತ್ತು. ಅರೆನಗ್ನ ಸ್ಥಿತಿಯಲ್ಲಿದ್ದ ಮಗಳ ಕಳೆಬರ ಕಂಡು ಆತ ಬವಳಿ ಬಂದು ಬೀಳುವುದೊಂದೇ ಬಾಕಿ. ಆಕೆಯ ಬಾಯಿ, ಕಣ್ಣು ಮತ್ತು ಗುಪ್ತಾಂಗಗಳಲ್ಲಿ ರಕ್ತ ಧಾರೆಯಾಗಿ ಹೆಪ್ಪುಗಟ್ಟಿತ್ತು. ಆಕೆಯ ಕನ್ನಡಕ ಒಡೆದು ಆಕೆಯ ಕಣ್ಣಿನಲ್ಲಿ ಕನ್ನಡಕದ ಚೂರುಗಳು ಸಿಕ್ಕಿಕೊಂಡಿದ್ದವು. ಎರಡು ಕಾಲುಗಳು ಸಂಪೂರ್ಣ 90 ಡಿಗ್ರಿ ಅಗಲವಾಗಿ ತೆರೆದಂತೆ ಇದ್ದವು.ವ್ಯಕ್ತಿಯ ಪೆಲ್ವಿಕ್ ಗರ್ಡಲ್ (ಶ್ರೋಣಿಯ ನಡುಕಟ್ಟು) ಸಂಪೂರ್ಣವಾಗಿ ಘಾಸಿಗೊಂಡು ಮುರಿದು ಹೋದಾಗ ಮಾತ್ರ ವ್ಯಕ್ತಿಯ ಕಾಲುಗಳು ಆ ರೀತಿ 90 ಡಿಗ್ರಿ ಕೋನದಲ್ಲಿ ದೊರೆಯಲು ಸಾಧ್ಯ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper


ಆಕೆಯ ದೇಹಕ್ಕಾದ ಅವಸ್ಥೆಯನ್ನು ನೋಡಿದರೆ ಬಹುಶಹ ಇದೊಂದು ಗ್ಯಾಂಗ್ ರೇಪ್ ಎಂಬುದು ದೃಢವಾಗುತ್ತದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳುತ್ತಾರೆ. ಆಕೆಯ ಕುತ್ತಿಗೆಯ ಭಾಗವನ್ನು ಒತ್ತಿ ಹಿಡಿದಿದ್ದು ಆಕೆ ಉಸಿರುಗಟ್ಟಿ ಸತ್ತ ನಂತರವೂ ಕೂಡ ಆಕೆಯ ಮೇಲೆ ಅಮಾನುಷವಾಗಿ ಪದೇಪದೇ ಅತ್ಯಾಚಾರ ನಡೆಸಲಾಗಿದೆ.

ಆಕೆಯ ಹಲವಾರು ಸ್ನೇಹಿತರು ಆಕೆಯ ಶವವನ್ನು ಸುತ್ತುವರಿದಿದ್ದು, ಸಾಕ್ಷಿ ನಾಶವಾಗಬಾರದೆಂದು ಸಾಕಷ್ಟು ಪ್ರಯತ್ನ ಪಟ್ಟಿದ್ದಾರೆ. ಶವದ ಪೋಸ್ಟ್ ಮಾರ್ಟಮ್ ಮುಗಿಯುವರೆಗೂ ಕದಲಲಿಲ್ಲ. ಕರ್ತವ್ಯನಿರತಳಾಗಿದ್ದ ಓರ್ವ ವೈದ್ಯೆ ರಾತೋರಾತ್ರಿ ಅಮಾನುಷವಾಗಿ ಅತ್ಯಾಚಾರಕ್ಕೊಳಪಟ್ಟು ಕೊಲೆಯಾಗಿರುವುದು ನಾಗರಿಕ ಸಮಾಜ ತಲೆ ತಗ್ಗಿಸುವಂತೆ ಆಗಿದೆ.

ಈ ಕುರಿತು ಆಕೆ ಓದುತ್ತಿರುವ ಕಾಲೇಜಿನ ಡೀನ್ ರನ್ನು ಪ್ರಶ್ನಿಸಿದಾಗ ಆಕೆ




ವಿಕೃತ ಮನಸ್ಥಿತಿಯನ್ನು ಹೊಂದಿದ್ದ ಹೆಣ್ಣು ಮಗಳಾಗಿದ್ದು, ಆಕೆಯ ಆತ್ಮಹತ್ಯೆಗೂ ತಮಗೂ ಸಂಬಂಧವಿಲ್ಲ ಎಂದು ಆತ ಹೇಳಿಕೆ ಕೊಟ್ಟರು. ಪೋಸ್ಟ್ ಮಾರ್ಟಮ್ ಮುಗಿದ ಕೂಡಲೇ ಆಕೆಯ ಅಂತಿಮ ಸಂಸ್ಕಾರವನ್ನು ಅವಸರದಲ್ಲಿ ಮಾಡುವಂತೆ ಆಕೆಯ ಪಾಲಕರನ್ನು ಒತ್ತಾಯಿಸಿ ಯಶಸ್ವಿಯಾದರು.ಆಕೆ ಸತ್ತ ಕೆಲವೇ ಗಂಟೆಗಳಲ್ಲಿ ಆಕೆ ಸತ್ತ ಕೋಣೆಯನ್ನು ಮರುನವೀಕರಣಕ್ಕೆ ಒಳಪಡಿಸಿದಾಗ ಅಲ್ಲಿದ್ದ ಉಳಿದ ವೈದ್ಯಕೀಯ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಮುಂದಿನ ನಾಲ್ಕು ಗಂಟೆಗಳಲ್ಲಿ ನಡೆದ ನಾಟಕೀಯ ಬೆಳವಣಿಗೆಯಲ್ಲಿ ಅದೇ ಮೆಡಿಕಲ್ ಕಾಲೇಜಿನ ಡೀನ್ ಸಂದೀಪ್ ಘೋಷ್ ತನ್ನ ರಾಜೀನಾಮೆ ಪತ್ರವನ್ನು ಸಲ್ಲಿಸುವುದರ ಜೊತೆ ಜೊತೆಗೆ ಆಕೆ ತನ್ನ ಮಗಳಿದ್ದಂತೆ ಎಂದು ಕೂಡ ಹೇಳಿದರು.




ಮತ್ತೆ ನಡೆದ ಬೆಳವಣಿಗೆಯಲ್ಲಿ ಆ ಡೀನ್ ರನ್ನು ಅದೇ ಸಂಸ್ಥೆಯ ಮತ್ತೊಂದು ಪ್ರತಿಷ್ಠಿತ ವೈದ್ಯಕೀಯ ಕಾಲೇಜಿನ ಸಮಾನಾಂತರ ಹುದ್ದೆಗೆ ಭರ್ತಿ ಮಾಡಲಾಯಿತು.... ಆದರೆ ಆ ಪ್ರತಿಷ್ಠಿತ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು ಈ ಡೀನರನ್ನು ಕಾಲೇಜಿನ ಒಳಗೆ ಪ್ರವೇಶಿಸಲು ಸಾಧ್ಯವಿಲ್ಲದಂತೆ ಅಡ್ಡಗಟ್ಟಿದರು. ಕಳೆದೆರಡು ದಿನಗಳ ಹಿಂದೆ ಆ ಕಾಲೇಜಿನ ಎಲ್ಲ ವಿದ್ಯಾರ್ಥಿಗಳು ಕ್ಯಾಂಡಲ್ ಹಿಡಿದು ಶಾಂತಿಯುತ ಮೆರವಣಿಗೆ ನಡೆಸಲು ಪ್ರಯತ್ನಿಸಿದಾಗ ಅವರನ್ನು ಲಾರಿಗಳಲ್ಲಿ ಬಂದ ಹಲವಾರು ಗೂಂಡಾಗಳ ಗುಂಪು ಮನೆಬಂದಂತೆ ಹೊಡೆದು ಚದುರಿಸಿತು.

ಆ ವೈದ್ಯಕೀಯ ವಿದ್ಯಾರ್ಥಿನಿ ಸತ್ತ ದಿನವೇ ಈ ಕೇಸನ್ನು ಇಲ್ಲಿಯೇ ಮುಚ್ಚಿ ಹಾಕಿ ಇದರ ಹಿಂದೆ ದೊಡ್ಡವರ ಕೈವಾಡವಿದೆ ಎಂದು ಹೇಳಿದ ಪೊಲೀಸ್ ಕಮಿಷನರ್ ಇದೀಗ ಅಗಸ್ಟ್ 15 ರ ಮಧ್ಯರಾತ್ರಿ ಕ್ಯಾಂಡಲ್ ಹಿಡಿದು ಶಾಂತಿಯುತವಾಗಿ ಧರಣಿ ನಡೆಸುತ್ತಿದ್ದ ವೈದ್ಯಕೀಯ ವಿದ್ಯಾರ್ಥಿಗಳ ಮುಂದೆ ನಿಂತು ತಾವು ಪ್ರಾಮಾಣಿಕವಾಗಿ ತನಿಖೆ ನಡೆಸುತ್ತಿರುವುದಾಗಿಯೂ ಮಾಧ್ಯಮದವರ ಮಧ್ಯ ಪ್ರವೇಶದಿಂದ ಈ ಪ್ರಕರಣ ಗಂಭೀರ ತಿರುವುಗಳನ್ನು ಪಡೆದುಕೊಂಡಿದೆ ಎಂದು ಹೇಳುವ ಮೂಲಕ ತಮ್ಮ ಇಲಾಖೆ ತಲೆತಗ್ಗಿಸುವಂತೆ ಮಾಡಿದ್ದಾರೆ.

ಪಶ್ಚಿಮ ಬಂಗಾಳ ಸರ್ಕಾರದ ಮುಖ್ಯಮಂತ್ರಿಯವರು ಪ್ರಕರಣದ ತನಿಖೆ ಮಾಡಲು ಕೇವಲ ಆರು ದಿನಗಳ ಗಡುವನ್ನು ನೀಡಿದ್ದು, ಅಷ್ಟರಲ್ಲಿ ಅಪರಾಧಿಗಳನ್ನು ಕಂಡುಹಿಡಿದು ನ್ಯಾಯಾಂಗದ ವಶಕ್ಕೆ ಕೊಡಬೇಕೆಂದು ಹೇಳಿದ್ದಾರೆ. ಈ ಮಧ್ಯ ಇಡಿ ಪಶ್ಚಿಮ ಬಂಗಾಳದದ್ದಂತ ಜನಾಕ್ರೋಶ ಮುಗಿಲು ಮುಟ್ಟಿದ ಕಾರಣ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿ ಈ ಪ್ರಕರಣವನ್ನು ಸಿಬಿಐಗೆ ವಹಿಸಿದೆ.

ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಈ ಕುರಿತು ತನ್ನ ಪ್ರಕಟಣೆಯನ್ನು ಹೊರಡಿಸಿದ್ದು... ಕರ್ತವ್ಯ ನಿರತಳಾಗಿದ್ದ ವೈದ್ಯಕೀಯ ವಿದ್ಯಾರ್ಥಿನಿಗಾದ ಅನ್ಯಾಯ ಅಕ್ಷಮ್ಯವಾದ ಅಪರಾಧ. ಆಕೆಯ ಸಾವಿಗೆ ಹೊಣೆಗಾರರಾದವರನ್ನು ಸರ್ಕಾರ ಶೀಘ್ರವೇ ಗುರುತಿಸಿ ಶಿಕ್ಷಿಸಬೇಕು ಎಂದು ಒತ್ತಾಯಿಸಿರುವುದಲ್ಲದೆ 17 ಅಗಸ್ಟ್ ಶನಿವಾರ ಮುಂಜಾನೆ ಆರು ಗಂಟೆಯಿಂದ 18 ಆಗಸ್ಟ್ ರವಿವಾರ ಮುಂಜಾನೆ ಆರು ಗಂಟೆಯವರೆಗೆ ತುರ್ತು ಸೇವೆಗಳನ್ನು ಹೊರತುಪಡಿಸಿ ಉಳಿದೆಲ್ಲ ಸರ್ಕಾರಿ, ಅರೆ ಸರಕಾರಿ, ಖಾಸಗಿ ಆಸ್ಪತ್ರೆಗಳು ಕ್ಲಿನಿಕ್ ಗಳಲ್ಲಿ ಕೆಲಸ ಮಾಡುವ ವೈದ್ಯರು, ವೈದ್ಯಕೀಯ ಕಾಲೇಜಿನ ಆಸ್ಪತ್ರೆಗಳು ದೇಶಾದ್ಯಂತ ಬಂದ್ ಆಚರಿಸುವ ಮೂಲಕ ಪ್ರತಿಭಟನೆ ಮಾಡಲು ಕರೆ ನೀಡಿದ್ದಾರೆ.

ವೈದ್ಯೋ ನಾರಾಯಣೋ ಹರಿಃ ಎಂದು ವೈದ್ಯರನ್ನು ಭಗವಂತನ ಸ್ವರೂಪದಲ್ಲಿ ಕಾಣುವ ನಮ್ಮ ಭವ್ಯ ಭಾರತದಲ್ಲಿ ಅಂತಹ ವೈದ್ಯ ಅದರಲ್ಲೂ ಹೆಣ್ಣು ಮಗಳ ಮೇಲೆ ಎಸಗಿರುವ ವಿಕೃತಿ ಖಂಡನಾರ್ಹ. ಇಂತಹ ಘಟನೆಗಳು ನಡೆದಾಗ ಮೊದಮೊದಲು ಜೋರಾಗಿ ಪ್ರತಿಭಟಿಸುವ, ನಂತರ ಕಾಲ ಕಳೆದಂತೆ ಮರೆತುಬಿಡುವ ಒಂದೆರಡು ವರ್ಷಗಳ ಇಲ್ಲವೇ ಹಲವಾರು ವರ್ಷಗಳ ನಂತರ ಅಪರಾಧಿ ಹೊರ ಬಂದರೂ ತಲೆಕೆಡಿಸಿಕೊಳ್ಳದಂತಹ ಸಮಾಜದಲ್ಲಿ ನಾವಿಂದು ಬದುಕುತ್ತಿದ್ದು, ಇದುವೇ ನಮ್ಮ ಸಮಾಜದಲ್ಲಿ ಮಹಿಳೆಯರ ಮೇಲಿನ ವಿಕೃತ ಅತ್ಯಾಚಾರ ಅನಾಚಾರಗಳಿಗೆ ಕಾರಣವಾಗುತ್ತಿದೆ.

ಇಂತಹ ಸಮಯದಲ್ಲಿ ಸರ್ಕಾರವು ಇನ್ನೆಂದು ಹೆಣ್ಣು ಮಕ್ಕಳನ್ನು ಕೆಟ್ಟ ದೃಷ್ಟಿಯಿಂದ ತಲೆಯೆತ್ತಿ ನೋಡದಂತಹ ಶಿಕ್ಷೆಯನ್ನು ವಿಧಿಸಬೇಕು. ಇಂತಹ ವಿಕೃತ ಅಪರಾಧಿಗಳು ರಾಜಕೀಯ ಕಾರಣಗಳಿಂದ ಕಾನೂನಿನ ಕಣ್ಣಿನಿಂದ ತಪ್ಪಿಸಿಕೊಳ್ಳದಂತೆ ಅವರನ್ನು ಬಂಧಿಸಿ ಟ ಕಾನೂನು ಕ್ರಮ ಕೈಗೊಳ್ಳಬೇಕು. ಹೆಣ್ಣು ಮಕ್ಕಳನ್ನು ಗೌರವದಿಂದ ಕಾಣುವ, ಪರ ಸ್ತ್ರೀಯರಲ್ಲಿ ಕೂಡ ತಮ್ಮ ತಾಯಿ ತಂಗಿಯರನ್ನು ಅರಸುವ ಉತ್ತಮ ಗಂಡು ಮಕ್ಕಳನ್ನು ಬೆಳೆಸುವ ಜವಾಬ್ದಾರಿ ಮತ್ತು ಜರೂರತ್ತು ಈ ಮೊದಲಿಗಿಂತ ಹೆಚ್ಚಾಗಿದ್ದು ಆ ದಿಶೆಯಲ್ಲಿ ಮುಂದುವರೆಯೋಣ.

ಚಿಕ್ಕ ವಯಸ್ಸಿನಲ್ಲಿಯೇ ತನಗಾದ ಅನ್ಯಾಯಕ್ಕೆ ಜೀವವನ್ನೇ ಬಲಿಕೊಟ್ಟ ಯುವ ವೈದ್ಯೆಯ ಆತ್ಮಕ್ಕೆ ಶಾಂತಿ ದೊರೆಯುವುದು ಆಕೆಯ ಮೇಲೆ ಅತ್ಯಾಚಾರವೆಸಗಿದ ದುಷ್ಕರ್ಮಿಗಳಿಗೆ ಶಿಕ್ಷೆ ದೊರೆತಾಗ.... ಸಮಸ್ತ ಭಾರತೀಯರು ತಮ್ಮ ಮನೆಯಲ್ಲೂ ಹೆಣ್ಣು ಮಕ್ಕಳಿದ್ದಾರೆ, ಇಂದಿನ ನಮ್ಮ ಮೌನ ಮುಂದೆ ನಮ್ಮ ಮನೆಯ ಮಕ್ಕಳ ಆಕ್ರಂದನಕ್ಕೆ ಕಾರಣವಾಗದಿರಲಿ ಎಂಬ ಎಚ್ಚರಿಕೆಯನ್ನು ಹೊಂದಿರಲಿ ಎಂಬ ಆಶಯದೊಂದಿಗೆ

# ಪ್ರೀತಿ ಇಲ್ಲದೆ ಹೂವು ಅರಳೀತು ಹೇಗೆ..?

ಎರಡಕ್ಷರದ ಪ್ರೀತಿಯ ಆಳ ಅಗಲಗಳನ್ನು ಬರಿ ಮಾತಿನಲ್ಲಾಗಲಿ, ಬರವಣಿಗೆಯಲ್ಲಾಗಲಿ ಹೇಳಲಾಗದು. ಅದು ಜಗದ ನಿಯಮ, ಈ ಜಗದ ಉಗಮದ ಕಾರಣ, ಜೀವನ ಪ್ರೀತಿಯ ಪ್ರೇರಕ, ನಮ್ಮೀ ಬದುಕಿಗೆ ಪೂರಕ ಅದು. ಈ ಪ್ರೀತಿ ಕೇವಲ ಎರಡೇ ಅಕ್ಷರವಾಗಿದ್ದರೂ ಅದಕ್ಕೆ ಎಲ್ಲವನ್ನು ಜಯಿಸುವ ಶಕ್ತಿಯಿದೆ. ಎಲ್ಲವನ್ನೂ ಒಳಗೊಳ್ಳುವ ವ್ಯಾಪ್ತತೆ ಇದೆ ಅದಕ್ಕೊಂದು ಅನಂತವಾದ ವ್ಯಾಪಕತೆ ಮತ್ತು ಅವಿಚ್ಛನ್ನವಾದ ಆಪ್ತತೆ ಪ್ರೀತಿಯ ಲಕ್ಷಣವಾಗಿದೆ.

ಅಂತಹ ಅದ್ಭುತವಾದ ಅಮರ ತತ್ವವನ್ನು ಕೇವಲ ಹುಡುಗ ಮತ್ತು ಹುಡುಗಿಯರ, ಗಂಡು ಹೆಣ್ಣುಗಳ ಒಲವು ಗೆಲುವುಗಳಿಗೆ ಸೀಮಿತಗೊಳಿಸುವುದು ಎಷ್ಟು ಸರಿ? ಈಗಿನ ಕಾಲದಲ್ಲಿ ಕೇವಲ ಸಮಯಕ್ಕೆ ಅನುಗುಣವಾಗಿ ಕಾಲಕ್ಕೆ ತಕ್ಕಂತೆ ಲೌಖಿಕ ಆಕರ್ಷಣೆಗಳಾದ ಹಣ, ಅಂತಸ್ತು, ದೇಹ ದಾರ್ಡ್ಯತೆ ಇನ್ನಿತರ ವಿಚಾರಗಳಿಗೆ ಮಾರುಹೋಗಿ ಪ್ರೀತಿ ಮಾಡುವವರೇ ಹೆಚ್ಚಾಗಿರುತ್ತಾರೆ. ಹಾಗಾಗಿ ಇವರೆಲ್ಲರ ಪ್ರೀತಿಯ ಈ ಬಂದ ಕೇವಲ ಕ್ಷಣಿಕವಾಗಿ ಕ್ಷೀಣಿಸಿ ಪ್ರೀತಿಯಲ್ಲಿ ಮೋಸ, ಬ್ರೇಕಪ್ ಗಳು, ಗಂಡ ಹೆಂಡತಿಯರಲ್ಲಿ ಡೈವರ್ಸಗಳು ಆತ್ಮಹತ್ಯಯಂತಹ ಅನಾಹುತಕಾರಿ ಘಟನೆಗಳು, ಇವೆಲ್ಲವನ್ನೂ ಮೀರಿಸುವಂತಹ ದ್ವೇಷದ ದಳ್ಳುರಿಯಲ್ಲಿ ಹಿಂಸೆ, ಕೊಲೆಯಂತಹ ವಿಕೃತಿಗಳು ಅಲ್ಲಲ್ಲೆ ಸಂಬವಿಸುವುದನ್ನು ಆಗಾಗ ಕಾಣುತ್ತೇವೆ. ನಮ್ಮ ಸಮಾಜದಲ್ಲಿ ಇತ್ತೀಚಿಗಂತೂ ಇಂತಹ ಘಟನೆಗಳು ಸರ್ವೇಸಾಮಾನ್ಯವಾಗಿ ಸಾಹಜಯನ್ನುವಂತಾಗಿಬಿಟ್ಟಿವೆ.



ಹೇಳಿ ಈ ಪ್ರೀತಿ ಇಂತಹ ಜಗದಗಲ, ಮುಗಿಲಗಲ ವಿಶ್ವವ್ಯಾಪಿ ಪ್ರೀತಿ ಯಾರಿಗೆ ತಾನೆ ಬೇಡ, ಎಲ್ಲರಿಗೂ ಈ ಪ್ರೀತಿ ಬೇಕೇ ಬೇಕು. ನಮ್ಮಗಳ ನಡುವಿನ ಸಂಬಂಧವೂ ಜೀವಂತಿಕೆಯಿಂದ ಕೂಡಿರಬೇಕು ಎಂದರೆ ಅಲ್ಲಿ ಈ ಪ್ರೀತಿಯಿರಲೇ ಬೇಕು. ಅದು ಗಂಡು ಹೆಣ್ಣಿಗೆ ಅಂದರೆ ತರುಣ-ತರಣಿಯರ ನಡುವಿನ ಒಲವಾಗಿರಲಿ, ಗಂಡ-ಹೆಡತಿಯ ನಡುವಿನ ಸಂಬಂದವಾಗಲಿ, ಅಣ್ಣ-ತಂಗಿಯರ, ಅಕ್ಕ-ತಮ್ಮಂದಿರ ನಡುವಿನ ಅನುಬಂದವಾಗಲಿ, ಅಪ್ಪ-ಮಗಳು, ಅಮ್ಮ-ಮಗನ ಜನ್ಮ ಜನ್ಮದ ಋಣಾನುಬಂದವಾಗಲಿ ಅದು ಒಂದು ಹೃದಯದಿಂದ ಇನ್ನೊಂದು ಹೃದಯಕ್ಕೆ, ಒಂದು ಸಂಬಂದದಿಂದ ಇನ್ನೊಂದು ಸಂಬಂದಕ್ಕೆ, ಒಂದು ನೆಲದಿಂದ ಇನ್ನೊಂದು ನೆಲಕ್ಕೆ, ಒಂದು ಜಗತ್ತಿನಿಂದ ಇನ್ನೊಂದು ಜಗತ್ತಿಗೆ, ಹೀಗೆ ಪಶು-ಪಕ್ಷಿ ಎನ್ನದೆ, ಮನುಷ್ಯ ಕುಲ-ನೆಲೆ ಎನ್ನದೆ, ಮೇಲು-ಕೀಳುಗಳೆನ್ನದೆ, ದೇಶ-ಭಾಷೆಗಳೆನ್ನದೆ, ವಿಷಯ-ವಸ್ತುಗಳೆನ್ನದೆ, ಅಣುರೇಣು ಕಣಗಳಾದಿಯಾಗಿ, ಸಕಲ ಚರಾಚರ ವಸ್ತುಗಳಾದಿಯಾಗಿ ಒಬ್ಬರಿಂದ ಇನ್ನೊಬ್ಬರಿಗೆ, ಒಂದು ಕಡೆಯಿಂದ ಇನ್ನೊಂದು ಕಡೆಗೆ ಸುಪ್ತವಾಗಿ, ಗುಪ್ತವಾಗಿ, ಕೆಲವೊಮ್ಮೆ ಬೋರ್ಗರೆಯುತ್ತ ಪ್ರವಹಿಸಲೇ ಬೇಕು ಅಷ್ಟೆ.

ಪ್ರೀತಿಸಲೇಕೆ ಭಯ, ಅದು ಜಗದ ಪಾಯ
ಉಂಟೇ ಆಲಯ, ಇಲ್ಲದೆ ಪಾಯ
ಇದನರಿತರೆ ಜಯ, ಮರೆತರೆ ಅಪಾಯ
ನುರಿತವರಿಗಿಲ್ಲ, ಆ-ಲಯದ ಭಯ

ಜಗತ್ತಿನಲ್ಲಿ ಮಾನವನನ್ನು ಮನುಷ್ಯನನ್ನಾಗಿ, ನರನನ್ನು ನಾರಾಣನನ್ನಾಗಿಸುವ ಅಮೃತ ಸಮಾನವಾದ ಪ್ರೀತಿಯನ್ನು, ಹಂಚಿದಷ್ಟು ಇಮ್ಮಡಿಗೊಳ್ಳುವ ಪರಮ ಪವಿತ್ರ ಪ್ರೀತಿಯನ್ನುವ ಅಂತರ ಗಂಗೆಯನ್ನು ತಡೆದು ನಿಲ್ಲಿಸುವ ಪ್ರಯತ್ನವನ್ನು ಮಾಡಬಾರದು. ಆದರೆ ಕೆಲವೊಮ್ಮೆ ಅತಿಯಾಗಿ ಪ್ರೀತಿಸುವ ನಮ್ಮ ನಮ್ಮವರು ಇದ್ದಕ್ಕಿಂದ್ದಂತೆ ಬದಲಾಗಿಬಿಡುತ್ತಾರಲ್ಲ ಎನ್ನುವ, ನಿನ್ನೆ ಮೊನ್ನೆಯವರೆಗೆ ಒಂದು ಆತ್ಮ ಎರಡು ದೇಹ ಎನ್ನುವಂತಿದ್ದವರು ಇಂದು ಹರಿದ ಅಂಗಿಯಂತಾಗಿರುತ್ತರಲ್ಲ ಎಂದರೆ ನನ್ನ ಬಳಿ ಉತ್ತರವಿಲ್ಲ. ಆದರೆ ಇದಕ್ಕೆ ಕಾರಣ ಹುಡುಕುವುದಕ್ಕಿಂತ ಏಕೆ ನಮ್ಮಗಳ ಪ್ರೀತಿಯಲ್ಲಿ ಇದ್ದಕ್ಕಿದ್ದಹಾಗೆ ಈ ರೀತಿಯ ಬದಲಾವಣೆ ಉಂಟಾಗುತ್ತದೆ ಎನ್ನುವುದನ್ನು ಅರಿಯುವ ಪ್ರಯತ್ನ ಮಾಡಬೇಕು.

ಹಾಗಾಗಿ ಅತಿಯಾಗಿ ಪ್ರೀತಿಸುತ್ತಿದ್ದ ವ್ಯಕ್ತಿಗಳಿಬ್ಬರೂ ಸಣ್ಣ ಪುಟ್ಟ ಕಾರಣಕ್ಕಾಗಿ ಒಬ್ಬರಿಂದೊಬ್ಬರು ದೂರಾಗುವ ವಿಚಾರವನ್ನು ಮಾಡುತ್ತಿದ್ದಾರೆ ಎಂದರೆ, ಇದರಲ್ಲಿ ಅವರು ಅವರು ಪ್ರೀತಿ ಮಾಡುವ ವಿದಾನ, ರೀತಿ ಇಲ್ಲವೆ ವಿಚಾರದಲ್ಲಿನ ಲೋಪದೂಷವಿರಬಹುದೆ ಹೊರತು, "ಪ್ರೀತಿ" ಯಲ್ಲಲ್ಲ ಎನ್ನುವುದನ್ನು ಮೊದಲು ನಾವು ಮನಗಾಣಬೇಕು. ಒಂದು ವೇಳೆ ಹುಚ್ಚು ಹಿಡಿದಂತೆ ಒಬ್ಬರೊಬ್ಬರನ್ನು ಹಚ್ಚಿಕೊಂಡಿದ್ದಾರೆ ಎನ್ನುವುದಾದರೆ ಆ ಹುಚ್ಚು ಎನ್ನುವುದೇ ತಪ್ಪು..! ಏಕೆಂದರೆ ಪ್ರೀತಿಯ ಆಳ-ಹರವು ಗೊತ್ತಿರುವ ಯಾರು ಹುಚ್ಚರಂತೆ ಪ್ರೀತಿ ಮಾಡುವುದಿಲ್ಲ, ಬದಲಿಗೆ ಒಬ್ಬರೊಬ್ಬರನ್ನು ಹಚ್ಚಿಕೊಂಡು, ಮೆಚ್ಚಿಕೊಂಡು, ಅವರವರ ಇಚ್ಚೆಯನ್ನು ಅರಿತುಕೊಂಡು, ಒಬ್ಬರು ಇನ್ನೊಬ್ಬರಿಗಾಗಿ ಬದುಕುತ್ತಾರೆ. ಅದು ನಿಜವಾದ ಪ್ರೀತಿ ಎನಿಸುತ್ತದೆ.

ನಿಮ್ಮನ್ನು ಪ್ರೀತಿಸುತ್ತಿದ್ದ ಹುಡುಗಿಯೂ ಅಥವಾ ಹುಡುಗನೊ ನಿಮ್ಮನ್ನು ಕಡೆಗಣಿಸುತ್ತಿದ್ದಾನೆ ಎಂದರೆ ಅವನು ಅಥವಾ ಅವಳು ನಿಮ್ಮನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎನ್ನುವುದೇ ಆಗಿರುತ್ತದೆ ಹೊರತು, ಇಲ್ಲವೆ ನೀವು ಅವರನ್ನು ಅರ್ಥೈಸುವಲ್ಲಿ ಎಡವಿದ್ದೀರಿ ಎಂದಾಗುತ್ತದೆ ಅಷ್ಟೆ. ಈ ಬಗ್ಗೆ ಇಬ್ಬರೂ ಇದನ್ನು ಗಂಭೀರವಾಗಿ ಪರಿಗಣಿಸುವುದು ಮುಖ್ಯ. ಇಲ್ಲದಿದ್ದರೆ ಕ್ರಮೇಣವಾಗಿ ನೀವಂದುಕೊಂಡಿರುವ ಪ್ರೀತಿಯೂ ನಿಮ್ಮ ಕೈ ತಪ್ಪಿ ಹೋಗಬಹುದು. ಹಾಗಾಗಬಾರದು ಎಂದರೆ,

**1. ನೀವು ಪ್ರೀತಿಸುವುದಕ್ಕಿಂತ ನಿಮ್ಮನ್ನು ಪ್ರೀತಿಸುವವರನ್ನು ಆಯ್ಕೆಮಾಡಿಕೊಳ್ಳಿ.**

ನಿಮ್ಮ ನಂಬಿದವರನ್ನು ಪದೇ ಪದೇ ನೋಯಿಸುವುದು, ಅವರು ನನ್ನನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎನ್ನುವುದು ಬಿಡಿ. ಕೆಲವು ಹುಡುಗ/ಹುಡುಗಿಯರು ತುಂಬಾ ಸೂಕ್ಷ್ಮ ಮನಸ್ಥಿತಿ ಉಳ್ಳವರಾಗಿರುತ್ತಾರೆ. ಅಂತವರನ್ನು ಪದೇ ಪದೇ ನೋಯಿಸುತ್ತಿದ್ದರೆ ಅವರಿಗೆ ಅದನ್ನು ಸಹಿಸಿಕೊಳ್ಳುವ ಶಕ್ತಿ ಇರುವುದಿಲ್ಲ. ಆಗ ಆ ಹುಡುಗ/ಹುಡುಗಿಯ ಮನಸ್ಸಲ್ಲಿ ತಾನು ಮಾಡಿದ ಆಯ್ಕೆಯೂ ಸರಿಯಿಲ್ಲ ಎಂದೆನಿಸಲು ಪ್ರಾರಂಭವಾಗಬಹುದು. ಹಾಗಾಗಿ ಅತಿಯಾಗಿ ಹಚ್ಚಿಕೊಳ್ಳುಕೊಳ್ಳುವುದಕ್ಕಿಂತ ಸರಿಯಾಗಿ ಅರ್ಥಮಾಡಿಕೊಳ್ಳುವುದು ಮುಖ್ಯ.

**2. ನಿರ್ಲಕ್ಷ ಸಲ್ಲದು,**

ಹೆಣ್ಣಾಗಲಿ/ ಗಂಡಾಗಲಿ ಸಹಜವಾಗಿ ಅವರನ್ನು ನಿರ್ಲಕ್ಷ ಮಾಡುವುದು ಕಂಡುಬಂದರೆ ಸಹಿಸುವುದಿಲ್ಲ. ಅದರಲ್ಲೂ ಹೆಣ್ಣುಮಕ್ಕಳು ಸಹಜವಾಗಿ ನಿರ್ಲಕ್ಷ ಮಾಡುವುದನ್ನು ಎಂದಿಗೂ ಸಹಿಸುವುದಿಲ್ಲ ಏಕೆಂದರೆ ಅವರು ತುಸು ಹೆಚ್ಚೇ ಬಾವನಾತ್ಮಕ ಜೀವಿಗಳಾಗಿರುತ್ತಾರೆ. ತನ್ನನ್ನು ತಾನು ನಂಬಿರುವವರ ಕುರಿತ ಅದು ಏನೇ ಆದರೂ ಅವರು ನನ್ನನ್ನು ಬಿಟ್ಟು ಕೊಡುವುದಿಲ್ಲ ಎನ್ನುವ ಅಪಾರವಾದ ನಂಬಿಕೆ ಅವಳದು. ಸಹಜವಾಗಿ ತಾನು ನಂಬಿದವರ ಬಗ್ಗೆ ಒಂದು ಸಹಜವಾದ ನಂಬಿಕೆ ಇರುತ್ತದೆ. ಯಾವುದೇ ಕಾರಣಕ್ಕೂ ನನ್ನವರ ದೃಷ್ಠಿಯಲ್ಲಿ ನಾನು ನಿರ್ಲಕ್ಷಕ್ಕೆ ಒಳಗಾಗುವುದಿಲ್ಲ ಎನ್ನುವುದು. ತನ್ನನ್ನು ಪ್ರಾಮಾಣಿಕವಾಗಿ ಪ್ರೀತಿಸುವವರು ಏನೇ ಆದರೂ ನನ್ನನ್ನು ಬಿಟ್ಟು ಕೊಡುವುದಿಲ್ಲ ಎನ್ನುವ ಭಾವ ಹೊಂದಿರುತ್ತಾರೆ. ಹಾಗಾಗಿ ಆ ನಂಬಿಗೆ ಹಾಳಾಗದಂತೆ ಕಾಪಿಟ್ಟುಕೊಳ್ಳಬೇಕು.

**3. ಭಾವನಾತ್ಮಕ ಬೆಂಬಲ ಅವಶ್ಯಕ :**

ಪ್ರಾಮಾಣಿಕವಾಗಿ ಪ್ರೀತಿಸುವ ಯಾರೆ ಆದರೂ ತನ್ನವರಿಂದ ಬಯಸುವುದು ಭಾವನಾತ್ಮಕ ಬೆಂಬಲವೇ ಆಗಿರುತ್ತದೆ. ಒಂದು ವೇಳೆ ಇದರಲ್ಲಿ ಕಂಡುಬರುವ ಕೊರತೆಯು ಅವರ ಸಂಬಂಧದಲ್ಲಿ ಬಿರುಕಾಗಲು ಕಾರಣವಾಗ ಬಹುದು. ಭಾವನೆಗಳನ್ನು ಹಂಚಿಕೊಳ್ಳುವುದು, ಏನೇ ಆದರೂ ನಾನಿದ್ದೇನೆ ಎನ್ನುವ ಸಾಂತ್ವಾನದ ಮಾತುಗಳು ಅವಶ್ಯಕ.

**4. ಸಮಯ ಎಲ್ಲರಿಗೂ ಬೇಕು.**

ತಾನು ನಂಬಿದವರು, ತನ್ನನ್ನು ನಂಬಿದವರು ಯಾವತ್ತೂ ತನ್ನನ್ನು ಪ್ರೀತಿಸಬೇಕು, ತನ್ನೊಂದಿಗೆ ಅಮೂಲ್ಯವಾದ ಸಮಯ ಕಳೆಯಬೇಕು ಎಂದು ಬಯಸು ವುದು ಸಹಜ. ಏಕೆಂದರೆ ಸಮಯ ಎಲ್ಲರಿಗೂ ಬೇಕಲ್ಲವೆ.

ಈಗ ನೀವೆ ಹೇಳಿ ಪ್ರೀತಿ ಇಲ್ಲದೆ ಹೂವು ಅರಳೀತು ಹೇಗೆ.....



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**18–08–2024 – ಭಾನುವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉತ್ತರಾಷಾಡ |
| ಯೋಗ | : ಆಯುಷ್ಮಾನ್ |
| ಕರಣ | : ಸೌಭಾಗ್ಯ |
| ಸೂರ್ಯೋದಯ | : 06:05:33 |
| ಸೂರ್ಯಾಸ್ತ | : 18:55:29 |
| ರಾಹು ಕಾಲ | : 17:19–18:55 |
| ಯಮಘಂಡ ಕಾಲ | : 12:31–14:07 |
| ಗುಳಿಕ ಕಾಲ | : 15:43–17:19 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 17–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1623.32 ಅಡಿ |
| ಒಳ ಹರಿವು | 44721 ಕ್ಯುಸೆಕ್ |
| ಹೊರ ಹರಿವು | 61424 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 71.139 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1628.23 ಅಡಿ |
| ಒಳ ಹರಿವು | 2384 ಕ್ಯುಸೆಕ್ |
| ಹೊರ ಹರಿವು | 9787 ಕ್ಯುಸೆಕ್ |
| ಸಾಮರ್ಥ್ಯ | 87.562 ಟಿಎಂಸಿ |

# ಜನಪರ ಕಾಳಜಿಯ ಸರ್ಕಾರ ನಮ್ಮದು

## ಸಚಿವ ಬಿ.ಝೆಡ್.ಜಮೀರ್ ಅಹ್ಮದ್ ಖಾನ್ ಹೇಳಿಕೆ | ಜನಸ್ಪಂದನಾ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಬಳ್ಳಾರಿ**

ಜನರ ಸಮಸ್ಯೆಗಳನ್ನು ಅಧಿಕಾರಿಗಳ ಸಮ್ಮುಖದಲ್ಲೇ ಪರಿಹರಿಸುವ ಹಿತದೃಷ್ಟಿಯಿಂದ ಜನರ ಸಮಸ್ಯೆಗಳಿಗೆ ಸ್ಪಂದಿಸಿ ತ್ವರಿತ ಪರಿಹಾರ ಒದಗಿಸಲು ಜನಸ್ಪಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದ್ದು, ಜನಪರ ಕಾಳಜಿ ಇರುವ ಸರ್ಕಾರವಾಗಿದೆ ಎಂದು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ. ಝೆಡ್.ಜಮೀರ್ ಅಹ್ಮದ್ ಖಾನ್ ಅವರು ಹೇಳಿದರು.

ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ ಆವರಣದಲ್ಲಿ ಶನಿವಾರ ಏರ್ಪಡಿಸಿದ್ದ 'ಜನಸ್ಪಂದನ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜನರು ಇದ್ದಲ್ಲಿಗೆ ಸರ್ಕಾರದ ಸೇವೆಗಳು ತಲುಪಬೇಕು ಎನ್ನುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ನಿರ್ದೇಶನದಂತೆ, ಜನರ ಸಮಸ್ಯೆಗಳನ್ನು ಆಲಿಸಿ ಪರಿಹರಿಸಲು ಜಿಲ್ಲಾಡಳಿತದಿಂದ ಜನಸ್ಪಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ ಎಂದರು.

ಸಾರ್ವಜನಿಕರ ದೂರು, ಅಹವಾಲುಗಳನ್ನು ಆಲಿಸಿ, ಸಾಧ್ಯವಾದಷ್ಟು ಸಮಸ್ಯೆಗಳನ್ನು ಸ್ಥಳದಲ್ಲಿಯೇ ಮತ್ತು ಉಳಿದವುಗಳನ್ನು ಕಡಿಮೆ ಕಾಲಮಿತಿಯಲ್ಲಿ ಪರಿಹರಿಸಲಾಗುವುದು. ಉತ್ತಮ ಆಡಳಿತ ನೀಡಲು ಮತ್ತು ಸರಕಾರದ ಕಲ್ಯಾಣ ಕಾರ್ಯಕ್ರಮಗಳನ್ನು ಅರ್ಹ ಫಲಾನುಭವಿಗಳಿಗೆ ಸಕಾಲದಲ್ಲಿ ತಲುಪಿಸಲು ಅಧಿಕಾರಿಗಳು ಕ್ರಿಯಾಶೀಲವಾಗಿ ಕಾರ್ಯಪ್ರವೃತ್ತರಾಗಬೇಕಿದೆ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಈಗಾಗಲೇ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಯಶಸ್ವಿಯಾಗಿ ಈ ಕಾರ್ಯಕ್ರಮವನ್ನು ನಡೆಸಲಾಗಿದೆ. ಈ ಹಿಂದೆ ನಡೆದ ಜಿಲ್ಲಾ ಮಟ್ಟದ ಜನಸ್ಪಂದನಾ ಕಾರ್ಯಕ್ರಮದಲ್ಲಿ ಒಟ್ಟು 380 ಅರ್ಜಿ ಸಲ್ಲಿಕೆಯಾಗಿದ್ದವು.

**ವಸತಿ ಇಲಾಖೆಗೆ ರೂ.500 ಕೋಟಿ ಅನುದಾನ:** ಬಡವರು ಸ್ವಂತ ಸೂರು ಹೊಂದಬೇಕು ಎನ್ನುವ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಜನವರಿ ತಿಂಗಳಲ್ಲಿ ಕ್ಯಾಬಿನೆಟ್‌ನಲ್ಲಿ ವಸತಿ ಇಲಾಖೆಗೆ ರೂ.500 ಕೋಟಿ ಅನುದಾನ ಬಿಡುಗಡೆ ಮಾಡಿದರು. ಅದರಂತೆ ಫೆಬ್ರವರಿಯಲ್ಲಿ 36,789 ಮನೆಗಳನ್ನು ನೀಡಿದ್ದೇವೆ. ಮುಂದಿನ ತಿಂಗಳಲ್ಲಿ 38,200 ಮನೆಗಳನ್ನು ನೀಡಲಾಗುವುದು ಎಂದು ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆ ಎಂದರು.

**ಬಡವರ ಕಲ್ಯಾಣಕ್ಕಾಗಿ ಗ್ಯಾರಂಟಿ ಯೋಜನೆಗಳು:** ರಾಜ್ಯದ ಬಡಜನರ ಕಲ್ಯಾಣಕ್ಕಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿತಂದಿದ್ದು, ಕೇವಲ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳದೆ ಜನ ಸಾಮಾನ್ಯರ ಸುಸ್ಥಿರ ಜೀವನ ಸುಧಾರಣೆ ಮಾಡುವ ಉದ್ದೇಶದಿಂದ ಈ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ.

**ರೈತರು ಭಯಪಡುವ ಆತಂಕವಿಲ್ಲ:** ಈ ಭಾಗದ ರೈತರ ಜೀವನಾಡಿಯಾಗಿರುವ ತುಂಗಭದ್ರಾ ಅಣೆಕಟ್ಟೆಯ 19 ನೇ ಕ್ರಸ್ಟ್ ಗ್ರೇಟ್‌ನ ಸರಪಳಿಯು ಕಳೆದ ವಾರ ತುಂಡಾದ ಹಿನ್ನಲೆಯಲ್ಲಿ ಕಳೆದ 5 ದಿನಗಳಿಂದ ಸ್ಟಾಪ್ ಗೇಟ್ ಅಳವಡಿಕೆ ಕಾರ್ಯ ನಡೆಯುತ್ತಿದ್ದು, ನಿನ್ನೆಯಷ್ಟೇ ಮೊದಲ ಹಂತದ ಸ್ಟಾಪ್ ಗೇಟ್ ಅಳವಡಿಕೆ ಕಾರ್ಯ ಯಶಸ್ವಿಯಾಗಿದೆ. ಉಳಿದ ನಾಲ್ಕು ಹಂತದ ಸ್ಟಾಪ್ ಗೇಟ್ ಅಳವಡಿಕೆ ಕಾರ್ಯ ನಡೆಯುತ್ತಿದೆ. ಆದಕಾರಣ ರೈತರು ಆತಂಕ ಪಡಬಾರದು ಎಂದು ಸಚಿವರು ಅಭಯ ನೀಡಿದರು.



**ಸ್ಥಳದಲ್ಲಿಯೇ ಸಮಸ್ಯೆ ಆಲಿಸಿದ ಜಿಲ್ಲಾ ಉಸ್ತುವಾರಿ ಸಚಿವರು:** ಅತಿಥಿ ಉಪನ್ಯಾಸಕರ ನೇಮಕ, ಕಟ್ಟಡ ದುರಸ್ತಿ, ವಸತಿ ನಿರ್ಮಾಣ, ಕುಡಿಯುವ ನೀರು, ರಸ್ತೆ ನಿರ್ಮಾಣ, ವಿದ್ಯುತ್ ಹಾಗೂ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಒಟ್ಟು 232 ಅರ್ಜಿಗಳು ಜನಸ್ಪಂದನಾ ಕಾರ್ಯಕ್ರಮದಲ್ಲಿ ಸಲ್ಲಿಕೆಯಾದವು.

ಕಾರ್ಯಕ್ರಮದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್, ಉಪಮೇಯರ್ ಡಿ.ಸುಕುಂ, ವಕ್ಫ್ ಮಂಡಳಿಯ ಅಧ್ಯಕ್ಷ ಹುಮಾಯುನ್ ಖಾನ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಕೆ.ವಿ.ತ್ರಿಲೋಕ್‌ಚಂದ್ರ, ಡಿಜಿಪಿ ಬಿ.ಎಸ್.ಲೋಕೇಶ್ ಕುಮಾರ್, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ. ವಿ.ಜೆ., ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ, ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

# ಬೆಳಕಿನ ಹಾದಿ

## ಕೈಗೊಂಬೆ

■ **ಸುವರ್ಣಾ ಭಟ್ಟ**



ಅದೇಕೊ ಮಂಜಣ್ಣನಿಗೆ ವಿಪರೀತ ಅಹಂಕಾರ. ತಾನು ಹೇಳಿದಂತೆ ಮನೆಯವರು ಕೇಳಬೇಕೆಂದು ಬಯಸುತ್ತಿದ್ದ. ಮಂಜಣ್ಣನ ಆತ್ಮೀಯ ಸ್ನೇಹಿತ 'ಉಮೇಶ' ಇವನ ಮನೆಗೆ ಬಂದಾಗ, ಗೆಳೆಯನ ಅಹಂಕಾರ ಗಮನಿಸಿದವ ಅವನ ಒಂದು ಕಡೆ ಕೂರಿಸಿಕೊಂಡು ನೋಡು ಮಂಜ ನೀನು ಮಾಡುತ್ತಿರುವುದು ತಪ್ಪು'ನಮ್ಮ ಕೈಯಲ್ಲಿ ನಾವು ಕೀಲಿ ಕೊಟ್ಟಂತೆ ಕುಣಿಯುವುದು ನಿರ್ಜೀವ ಗೊಂಬೆ'. ಜೀವ ಇರುವ, ತಮ್ಮಂತೆ ಆಸೆ ಆಕಾಂಕ್ಷೆ ಇರುವ ಮಾನವನ ನಮ್ಮ ಕೈಗೊಂಬೆ ಮಾಡಿಕೊಂಡು ತಾಳಕ್ಕೆ ತಕ್ಕಂತೆ ಕುಣಿಸಬಾರದು.

"ಮತ್ತೊಬ್ಬರ ಹೆದರಿಸಿ ಬೆದರಿಸಿ ನಮ್ಮ ಕೈಗೊಂಬೆ ಮಾಡಿಕೊಂಡು ದುಡಿಸಿಕೊಳ್ಳಬಹುದು ಆದರೆ, ಮೇಲೊಬ್ಬ ಇರುವನಲ್ಲ ಅವನ ಕೈಗೊಂಬೆ ನಾವುಗಳು. ಗ್ರಹಚಾರ ಕೆಟ್ಟಾಗ ನಮ್ಮ ಕೆಟ್ಟತನಕ್ಕೆ ತಕ್ಕ ಶಾಸ್ತಿಯಾಗಿ ಮತ್ತೊಬ್ಬರ ಕೈಗೊಂಬೆಯಾಗಿ ಕುಣಿಯ ಬೇಕಾಗುತ್ತದೆ".

ಒಂದು ಮನೆಯೆಂದ ಮೇಲೆ ಎಲ್ಲ ಸದಸ್ಯರಿಗು ಅಲ್ಲಿ ಸಮನಾದ ಹಕ್ಕು ಇರಬೇಕು. ತಾನು ಮಾಡಿದ್ದೆ ಸರಿ, ತನ್ನ ಮಾತೇ ನಡೆಯಬೇಕು ಎಂಬ ಜಂಭತನ ಯಾರಲ್ಲೂ ಇರಬಾರದು.

ಪರರ ದೂಷಿಸುತ ತನ್ನ ತಪ್ಪುಗಳ ಸರಿ ಎಂದು ವಾದಿಸುತ ಬದುಕಬಾರದು. ನನ್ನ ಮಾತು ಈ ಮನೆಯ ಎಲ್ಲ ಸದಸ್ಯರು ಕೇಳಬೇಕು ಹಾಗೂ ನೀವೆಲ್ಲ ನನ್ನ ಕೈಗೊಂಬೆ ಎಂದು ಬೀಗುತ್ತಾ! ಆರಾಮವಾಗಿ ದಿನಕಳೆಯಬಹುದೆನ್ನುವ ಮನುಷ್ಯ ಕೊನೆಗೊಂದು ದಿನ ಪಶ್ಚಾತ್ತಾಪ ಪಡಬೇಕಾಗುತ್ತದೆ. ಆತನ ಕೈಲಾಗದ ಕಾಲದಲ್ಲಿ ಇತರ ಸದಸ್ಯರು ಸಹ ಅವನ ಅಹಂಕಾರಕ್ಕೆ ತಕ್ಕ ಉತ್ತರ ಕೊಡುವರು. ಆ ಉತ್ತರವ ತಡೆದುಕೊಳ್ಳುವ ಶಕ್ತಿ ಮೊದಲು ಅಹಂಕಾರದಿಂದ ಮೆರೆದ ವ್ಯಕ್ತಿಗೆ ಇರುವುದಿಲ್ಲ. ಹೊಂದಾಣಿಕೆಯಿಂದ ಕೂಡಿ ಬಾಳಿದರೆ, ಪ್ರೀತಿಯಿಂದ ವಿಷಯಗಳ ತಿಳಿಸಿ ಹೇಳಿದರೆ ನಮ್ಮ ಜೊತೆಗಿರುವವರು ಸಹ ನಮ್ಮ ಮಾತು ಒಪ್ಪಿಕೊಂಡು ಸ್ನೇಹದಿಂದ ಇರುವರು. ಅಹಂಕಾರದಿಂದ ಮೆರೆದರೆ ಕೊನೆಗೆ ಮನೆಯವರು, ಸ್ನೇಹಿತರು ನಮ್ಮಿಂದ ದೂರ ಸರಿಯುವರು.

ಯಾರು ನಮ್ಮ ಕೈಗೊಂಬೆಯಲ್ಲ. ಹಣ , ಅಧಿಕಾರದಿಂದ ಯಾರನ್ನು ನಾವು ಕುಣಿಸಬಾರದು ಎಂದ. ಮಂಜಣ್ಣನಿಗೆ ಗೆಳೆಯ ಉಮೇಶನ ಮಾತು ಸ್ಪಷ್ಟವಾಗಿ ಅರ್ಥವಾಯಿತು. ಅದರಂತೆ ತನ್ನ ತಪ್ಪುಗಳ ತಿದ್ದಿಕೊಂಡು ಮನೆಯವರ ಜೊತೆ ಖುಷಿಯಿಂದ ಕಾಲ ಕಳೆದ.

# ಶಾಲಾ ಶಿಕ್ಷಕರಿಂದ ವಿದ್ಯಾರ್ಥಿಗಳಿಗೆ ಪುಸ್ತಕ, ತಟ್ಟೆ ಲೊಟ ವಿತರಣೆ

## ಟಿ.ಬಸಾಪುರ, ಚೌಡಾಪುರ ಸಹಿಪ್ರಾಶಾಲೆ ವಿದ್ಯಾರ್ಥಿಗಳಿಗೆ ಪುಸ್ತಕ, ತಟ್ಟೆ, ಲೋಟ ವಿತರಿಸಿದ ಶಿಕ್ಷಕ ಕೆ.ತಿಪ್ಪೇಸ್ವಾಮಿ



■ **ಹಂಪಿ ಟೈಮ್ಸ್ ಕೊಟ್ಟೂರು**

ಸರ್ಕಾರಿ ಶಾಲೆಯಲ್ಲಿ ಮಕ್ಕಳು ಸದೃಢವಾಗಿರಲು ಉತ್ತಮ ಆಹಾರ ಮತ್ತು ಬೌದ್ಧಿಕ ಪ್ರಗತಿಗೆ ಗುಣಾತ್ಮಕ ಶಿಕ್ಷಣ ದೊರೆಯುತ್ತದೆ. ಪ್ರತಿ ಮಗು ಉತ್ತಮ ಶಿಕ್ಷಣ ಪಡೆದು ಉನ್ನತ ಸ್ಥಾನಕ್ಕೇರಬೇಕು ಎಂದು ಶಿಕ್ಷಕ ಕೆ.ತಿಪ್ಪೇಸ್ವಾಮಿ ಹೇಳಿದರು.

ತಾಲೂಕು ಸಮೀಪದ ಟಿ.ಬಸಾಪುರ ಮತ್ತು ಚೌಡಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿಧ್ಯಾರ್ಥಿಗಳಿಗೆ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಸ್ವಂತ ಹಣದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಲೋಟ, ತಟ್ಟೆಹಾಗೂ ಪುಸ್ತಕ ವಿತರಿಸಿ ಮಾತನಾಡಿದರು.

ಇಂದಿನ ಮಕ್ಕಳು ಭವಿಷ್ಯದ ಸುಭದ್ರ ದೇಶದ ನಿರ್ಮಾತೃಗಳಾಗಲಿದ್ದಾರೆ. ಪ್ರತಿ ಮಗುವೂ ಉತ್ತಮ ಶಿಕ್ಷಣ ಪಡೆದಾಗ ಮಾತ್ರ ತನ್ನ ಮತ್ತು ಪಾಲಕರ ಕನಸು ನನಸಾಗಿಸಲು ಸಾಧ್ಯ ಎಂದರು.

2023–24ನೇ ಸಾಲಿನಲ್ಲಿ ತಾಲೂಕಿನ ಉತ್ತಮ ಶಿಕ್ಷಕರೆಂದು ಆಯ್ಕೆ ಗೊಂಡು ಹಾಗೂ ಅಲ್ಲಿನ ಶಾಲೆಯ ಮಕ್ಕಳಿಗೆ ಇವರು ಅಚ್ಚುಮೆಚ್ಚಿನ ಸಹೃದಯ ಶಿಕ್ಷಕರು. ಹಿಂದೆ ಕರ್ತವ್ಯ ನಿರ್ವಹಿಸಿದ್ದ ಚೌಡಾಪುರ ಸ ಹಿ ಪ್ರಾ ಶಾಲೆಯ ವಿಧ್ಯಾರ್ಥಿಗಳಿಗೆ ಕ್ಷೀರಭಾಗ್ಯ ಮತ್ತು ರಾಗಿ ಗಂಜಿ ಸವಿಯಲು ಶಾಲೆಯ ಎಲ್ಲಾ ಮಕ್ಕಳಿಗೆ ಲೋಟಗಳನ್ನು ವಿತರಿಸಿ ಹಾಗೂ ಅದೇ ಶಾಲೆಯಲ್ಲಿ ನೂತನವಾಗಿ ಎಲ್ ಕೆ ಜಿ ತರಗತಿಗೆ ದಾಖಲಾದ ಮಕ್ಕಳಿಗೆ ಬರವಣಿಗೆಗೆ ಸಹಾಯವಾಗುವ ನೋಟ್ ಪುಸ್ತಕಗಳನ್ನು, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಟಿ.ಬಸಾಪುರ ಸ ಹಿ ಪ್ರಾ ಶಾಲೆ ವಿದ್ಯಾರ್ಥಿಗಳಿಗೆ ಬಿಸಿಯೂಟ ಸವಿಯಲು ತಟ್ಟೆಗಳನ್ನು ದೇಣಿಗೆಯಾಗಿ ನೀಡಿದರು. ಶಿಕ್ಷಕರ ಸೇವೆಯನ್ನು ಗ್ರಾಮಸ್ಥರು ಪ್ರಶಂಸಿಸಿದರು. ಚೌಡಾಪುರ ಶಾಲೆಯ ಮುಖ್ಯಗುರುಗಳು ರವಿ ಕುಮಾರ ಮತ್ತು ಸಿಬಂದಿ ಹಾಗೂ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು ಶಿಕ್ಷಕ ಕೆ.ತಿಪ್ಪೇಸ್ವಾಮಿ ಅವರನ್ನು ಸನ್ಮಾನಿಸಿದರು.

ಈ ಕಾರ್ಯಕ್ರಮದಲ್ಲಿ ಟಿ.ಬಸಾಪುರ ಶಾಲೆ ಮುಖ್ಯಗುರುಗಳು ಯರ್ರಿಸ್ವಾಮಿ ಹಾಗೂ ಚೌಡಾಪುರ ಶಾಲೆಯ ರವಿಕುಮಾರ್, ಎಸ್ ಡಿ ಎಂ ಸಿ ಅದ್ಯಕ್ಷ ಹನುಮಂತಪ್ಪ ಹಾಗೂ ಸದಸ್ಯರು, ಬಸಾಪುರ ಗ್ರಾಮದ ಗ್ರಾ ಪಂ ಉಪಾಧ್ಯಕ್ಷೆ ಕೆ ಟಿ ನೀಲಮ್ಮ ಮಾರೇಶ ಇತರರು ಉಪಸ್ಥಿತರಿದ್ದರು.

# ಲ್ಯಾಪಟಾಪ್, ತ್ರಿಚಕ್ರ ವಾಹನ ಖರೀದಿಗೆ ನಗರಸಭೆ ಸಹಾಯಧನ

■ **ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನ ಎಸ್.ಎಫ್.ಸಿ. ಯೋಜನೆ ಅಡಿಯಲ್ಲಿ ವ್ಯಕ್ತಿ ಸಂಬಂಧಿತ ಅನುಕೂಲಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದ್ದು, ವೈಯಕ್ತಿಕ ಫಲಾನುಭವಿಗಳಾಗ ಬಯಸುವವರು ಯೋಜನೆಯಡಿ ಅರ್ಜಿಯನ್ನು ಸೆಪ್ಟಂಬರ್ 12ರೊಳಗಾಗಿ ಹೊಸಪೇಟೆ ನಗರಸಭೆ ಕಾರ್ಯಾಲಯಕ್ಕೆ ಸಲ್ಲಿಸಬಹುದು. ಹೊಸಪೇಟೆ ನಗರದ ಎಂ.ಬಿ.ಬಿ.ಎಸ್ ಅಥವಾ ಬಿ.ಇ ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಗಾಗಿ 50.000 ರೂ. ಮೀರದಂತೆ ಸಹಾಯಧನ ನೀಡಲಾಗುವುದು.

ಹೊಸಪೇಟೆ ನಗರದ ಇತರೆ ಬಡಜನರಿಗೆ ಶಸ್ತ್ರ ಚಿಕಿತ್ಸೆಗೆ ಸಹಾಯಧನ ನೀಡಲಾಗುವುದು. ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಕ್ರೀಡೆ, ಕಲೆ, ಸಾಂಸ್ಕೃತಿಕ ಹಾಗೂ ಇತರೆ ವ್ಯಾಸಂಗೇತರ ಚಟುವಟಿಕೆಗಳಲ್ಲಿ ಭಾಗವಹಿಸುವ ಹೊಸಪೇಟೆ ನಗರದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗುವುದು. ಹೊಸಪೇಟೆ ನಗರದ ಸರ್ಕಾರಿ ಶಾಲೆಗಳು, ಕಾಲೇಜುಗಳು, ಸರ್ಕಾರದ ವೃತ್ತಿಪರ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗುವುದು. ಹೊಸಪೇಟೆ ನಗರಸಭೆ ವ್ಯಾಪ್ತಿಯಲ್ಲಿ ಬರುವ ವಿಕಲಚೇತನರಿಗೆ ಸಹ ತ್ರಿ-ಚಕ್ರ ವಾಹನ ಖರೀದಿಸಿ ನೀಡಲಾಗುವುದು.

ಎಸ್.ಎಫ್.ಸಿ ಯೋಜನೆಯಡಿ ಫಲಾನುಭವಿಗಳ ಆಯ್ಕೆ ಸಂದರ್ಭದಲ್ಲಿ ಅತಿ ಕಡು ಬಡವರಿಗೆ ಆದ್ಯತೆ ನೀಡಲಾಗುವುದು. ಅರ್ಜಿ ಸಲ್ಲಿಸಲು ಫಲಾನುಭವಿಗಳು ಕುಟುಂಬದ ಆದಾಯ ಪ್ರಮಾಣ ಪತ್ರ ಹಾಗೂ ಇತರೆ ದಾಖಲಾತಿಗಳನ್ನು ನೀಡಿ ಸಹಾಯಧನಕ್ಕೆ ಅರ್ಜಿ ಸಲ್ಲಿಸತಕ್ಕದ್ದು. ( ಫಲಾನುಭವಿಗಳು ತಪ್ಪು ದಾಖಾಲಾತಿ ಮತ್ತು ತಪ್ಪು ಮಾಹಿತಿ ನೀಡಿದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು) ಹೆಚ್ಚಿನ ಮಾಹಿತಿಯನ್ನು ಹಾಗೂ ಅರ್ಜಿ ನಮೂನೆಯನ್ನು ಕಾರ್ಯಾಲಯದ ವಿಷಯ ನಿರ್ವಾಹಕರಿಂದ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ www.hospetcity.gov.in ವೆಬ್‌ಸೈಟ್ ಅನ್ನು ಸಂಪರ್ಕಿಸಿ ಮಾಹಿತಿಯ ವಿವರವನ್ನು ಪಡೆದುಕೊಳ್ಳಬಹುದು.

# ಬಸ್ ನಿಲ್ದಾಣದಲ್ಲಿ ಕುಸಿದು ಬಿದ್ದು ವ್ಯಕ್ತಿ ಸಾವು:

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ಕುಸಿದು ಬಿದ್ದ ಸಮಾರು 35 ರಿಂದ 40 ವರ್ಷದ ಅನಾಮಧೇಯ ವ್ಯಕ್ತಿಯನ್ನು ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಗೆ ಸೇರಿಸಿದಾಗ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟ ಬಗ್ಗೆ ಹೊಸಪೇಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ ಆಗಸ್ಟ್ 9ರಂದು ಮಧ್ಯಾಹ್ನ 1 ಗಂಟೆ ಸುಮಾರಿಗೆ ಇದ್ದಕ್ಕಿದ್ದಂತೆ ಕುಸಿದು ಬಿದ್ದಾಗ 108ಗೆ ಕರೆ ಮಾಡಿ 100 ಬೆಡ್ ಸರ್ಕಾರಿ ಆಸ್ಪತ್ರೆಗೆ ಕಳುಹಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಆಗಸ್ಟ್ 10ರಂದು ಮೃತಪಟ್ಟಿರುತ್ತಾರೆ. ಮೃತನ ಮುಂದಿನ ಅಂತ್ಯ ಸಂಸ್ಕಾರಕ್ಕಾಗಿ ಅವರ ರಕ್ತ ಸಂಬಂಧಕರಾಗಲಿ, ಬಂಧುಬಳಗದವ ರಾಗಲಿ ಯಾರೂ ಪತ್ತೆಯಾಗಿರುವುದಿಲ್ಲ. ಮಾಹಿತಿಗಾಗಿ ದೂ.ಸಂ: 08394–224033/ 9480805745, ವಿಜಯನಗರ ಎಸ್.ಪಿ. ದೂ.ಸಂ 9480805700 ಗೆ ಸಂಪರ್ಕಿಸಿ.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ

### ಅರ್ಥಶಾಸ್ತ್ರ ಅಧ್ಯಾಯ– 15. ಅರ್ಥವ್ಯವಸ್ಥೆ ಮತ್ತು ಸರಕಾರ

**1. ಭಾರತದ ಆರ್ಥಿಕ ಯೋಜನೆಯ ಪಿತಾಮಹ ಯಾರು?**
ಉತ್ತರ:– ಸರ್ ಎಂ. ವಿಶ್ವೇಶ್ವರಯ್ಯ

**2. ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ' ಪುಸ್ತಕ ಬರೆದವರು ಯಾರು?**
ಉತ್ತರ:– ಸರ್ ಎಂ. ವಿಶ್ವೇಶ್ವರಯ್ಯ

**3. ನೀತಿ ಆಯೋಗದ ಅಧ್ಯಕ್ಷರು ಯಾರಾಗಿರುತ್ತಾರೆ ?**
ಉತ್ತರ:– ಪ್ರಧಾನ ಮಂತ್ರಿ

**4. ನೀತಿ ಆಯೋಗವು ಯಾವಾಗ ಸ್ಥಾಪನೆಯಾಯಿತು ?**
ಉತ್ತರ:– ಜನವರಿ 1 2015

**5 . 1987ರಲ್ಲಿ ಮೊದಲ 'ವಿಶ್ವ ಆಹಾರ ಪ್ರಶಸ್ತಿ' ಯನ್ನು ಪಡೆದವರು ಯಾರು?**
ಉತ್ತರ:– ಡಾ. ಎಂ.ಎಸ್. ಸ್ವಾಮಿನಾಥನ್

**6. ಆರ್ಥಿಕ ಯೋಜನೆಯ ಅರ್ಥ ತಿಳಿಸಿ.**
ಉತ್ತರ:– ಸರಕಾರದವು ಕೆಲವು ನಿರ್ಧಿಷ್ಟ ಧ್ಯೆಯೋದ್ದೇಶಗಳೊಂದಿಗೆ ದೇಶದಲ್ಲಿರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಗರಿಷ್ಠ ಮಟ್ಟಕ್ಕೆ ಹೆಚ್ಚಿಸಲು ಪ್ರಜ್ಞಾಪೂರ್ವಕವಾಗಿ ಮತ್ತು ವಿವೇಕಯುತವಾಗಿ ಜಾರಿಗೊಳಿಸುವ ಪ್ರಕ್ರಿಯೆಯನ್ನು ಆರ್ಥಿಕ ಯೋಜನೆ ಎನ್ನುತ್ತೇವೆ'

**7. ಹಸಿರುಕ್ರಾಂತಿ ಎಂದರೇನು?**
ಉತ್ತರ:– 1967–70 ರ ಅವಧಿಯಲ್ಲಿ ಭಾರತದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಆದಂತಹ ಶೀಘ್ರ ಪ್ರಗತಿಯನ್ನು ಹಸಿರು ಕ್ರಾಂತಿ' ಎಂದು ಕರೆಯುತ್ತಾರೆ.

**8. ಭಾರತದ ಹಸಿರು ಕ್ರಾಂತಿಯ ಪಿತಾಮಹ ಯಾರು?**
ಉತ್ತರ:– ಡಾ. ಎಂ.ಎಸ್. ಸ್ವಾಮಿನಾಥನ್

**9.ಸುಗ್ಗಿ ಪೂರ್ವ ತಂತ್ರಜ್ಞಾನ ಎಂದರೇನು?**
ಉತ್ತರ:– ಕೃಷಿ ಉತ್ಪಾದನೆಯಲ್ಲಿ ಬಳಸಲಾದ ಸುಧಾರಿತ ತಂತ್ರಜ್ಞಾನವನ್ನು 'ಸುಗ್ಗಿ ಪೂರ್ವತಂತ್ರಜ್ಞಾನ' ಎನ್ನುತ್ತಾರೆ.

**10.ಸುಗ್ಗಿ ನಂತರದ ತಂತ್ರಜ್ಞಾನ ಎಂದರೇನು?**
ಉತ್ತರ:– ಕೃಷಿ ಉತ್ಪನ್ನಗಳ ಸಂಗ್ರಹಣೆ, ಸಂಸ್ಕರಣೆ ಮತ್ತು ಮಾರಾಟದಲ್ಲಿ ಬಳಕೆಗೆ ತರಲಾದ ಸುಧಾರಿತ ತಂತ್ರಜ್ಞಾನವನ್ನು 'ಸುಗ್ಗಿ ನಂತರದ ತಂತ್ರಜ್ಞಾನ' ಎಂದು ಕರೆಯುತ್ತಾರೆ

**13.ಭಾರತದ ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ಬರೆಯಿರಿ. (ಜೂನ್ 2023)**
ಉತ್ತರ:– * ಉತ್ಪಾದನೆಯನ್ನು ಹೆಚ್ಚಿಸುವುದು
* ಉದ್ಯೋಗವಕಾಶಗಳನ್ನು ಹೆಚ್ಚಿಸುವುದು.
* ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು.
* ಆರ್ಥಿಕ ಸ್ಥಿರತೆಯನ್ನು ಸಾಧಿಸುವುದು.
* ಅರ್ಥವ್ಯವಸ್ಥೆಯನ್ನು ಆಧುನೀಕರಣ ಗೊಳಿಸುವುದು

**14. ಹಸಿರು ಕ್ರಾಂತಿಗೆ ಪ್ರೇರಣೆಯಾದ ಅಂಶಗಳಾವುವು?**
ಉತ್ತರ:– * ಸುಧಾರಿತ ಬೀಜಗಳು,
* ರಾಸಾಯನಿಕ ಗೊಬ್ಬರ, * ಕ್ರಿಮಿನಾಶಕಬಳಕೆ,
* ನೀರಾವರಿಸೌಲಭ್ಯ * ಸುಗ್ಗಿ ಪೂರ್ವ ತಂತ್ರಜ್ಞಾನ
* ಸುಗ್ಗಿ ನಂತರದ ತಂತ್ರಜ್ಞಾನ

www.hampitimes.com - Hampi Times Margadarshi

### ಸಮಾಜಶಾಸ್ತ್ರ ಅಧ್ಯಾಯ– 8 ಸಾಮಾಜಿಕ ಸ್ತರವಿನ್ಯಾಸ

**1. ಮಾನವಕುಲ ತಾನೊಂದೇ ವಲಂ ಎಂದು ಹೇಳಿದವರು ಯಾರು ? (ಎಪ್ರಿಲ್ 2023)**
ಉತ್ತರ:– ಪಂಪ

**2. ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ ಎಂದವರು ಯಾರು? (ಜೂನ್ 2023)**
ಉತ್ತರ:– ಮಹಾತ್ಮ ಗಾಂಧೀಜಿ

**3. ಅಸ್ಪೃಶ್ಯತಾ ಆಚರಣೆ ಶಿಕ್ಷಾರ್ಹ ಅಪರಾಧ ಎಂದು ತಿಳಿಸುವ ಸಂವಿಧಾನದ ವಿಧಿ**
ಉತ್ತರ:– 17ನೇ ವಿಧಿ

**.4. ಸಾಮಾಜಿಕ ಸ್ತರ ವಿನ್ಯಾಸ ಎಂದರೇನು? (ಏಪ್ರಿಲ್ 2024)**
ಉತ್ತರ:– ಜನರನ್ನು ಆದಾಯ, ಶಿಕ್ಷಣ, ಜಾತಿ, ಬಣ್ಣ, ಲಿಂಗ, ಉದ್ಯೋಗ, ಬುದ್ಧಿಶಕ್ತಿ ಮೊದಲಾದವುಗಳ ಆಧಾರದ ಮೇಲೆ ಮೇಲು–ಕೀಳು ಎಂದು ವಿಂಗಡಿಸುವುದೇ ಸಾಮಾಜಿಕ ಸ್ತರ ವಿನ್ಯಾಸ.

**5. ಪೂರ್ವಾಗ್ರಹ ಎಂದರೇನು? (2023)**
ಉತ್ತರ:– ಒಬ್ಬ ವ್ಯಕ್ತಿ ಮತ್ತೊಬ್ಬರ ಬಗ್ಗೆ ಹೊಂದಿರಬಹುದಾದ ಪೂರ್ವ ನಿರ್ಧಾರಿತ ಮನೋಭಾವನೆಯೇ ಪೂರ್ವಾಗ್ರಹ.

**6. ಸಾಮಾಜಿಕ ಸ್ತರ ವಿನ್ಯಾಸವು ಹೇಗೆ ಉಂಟಾಗಿದೆ? (ಜೂನ್2023, ಜೂನ್2024)**
ಉತ್ತರ:– ಜನರ ಆದಾಯ, ಶಿಕ್ಷಣ, ಜಾತಿ, ಬಣ್ಣ, ಲಿಂಗ, ಉದ್ಯೋಗ, ಬುದ್ಧಿಶಕ್ತಿ ಮೊದಲಾದವುಗಳ ಆಧಾರದ ಮೇಲೆ ಸಾಮಾಜಿಕ ಸ್ತರ ವಿನ್ಯಾಸವು ಉಂಟಾಗಿದೆ

**7. ಅಸ್ಪೃಶ್ಯತೆ–ಒಂದು ಸಾಮಾಜಿಕ ಪಿಡುಗು ಹೇಗೆ? 3 ಅಂಕ**
ಉತ್ತರ:– 1. ಮೇಲುಜಾತಿ ಹಾಗು ಕೆಳಜಾತಿಗಳ ವಿಂಗಡಣೆ.
2. ಕೆಳಜಾತಿಗಳ ಅಸ್ಪೃಶ್ಯತೆ ಅಮಾನವೀಯ ಆಚರಣೆ.
3. ಮಹಾತ್ಮ ಗಾಂಧೀಜಿಯವರು "ಅಸ್ಪೃಶ್ಯತೆಯನ್ನು ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ ಎಂದು ಹೇಳಿದ್ದಾರೆ.
4. ಕೆಳಜಾತಿಗಳು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ರಾಜಕೀಯ ಅವಕಾಶಗಳಿಂದ ವಂಚಿತವಾದವು.
5. ಬಾವಿ, ಕೆರೆಯಲ್ಲಿನ ನೀರನ್ನು ಬಳಸಲು ಬಿಡುತ್ತಿರಲಿಲ್ಲ.

**8. ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು? 3 ಅಂಕ ವಿವರಿಸಿ. (ಸೆಪ್ಟಂಬರ್2020/ಸೆಪ್ಟಂಬರ್ 2022)**
ಉತ್ತರ:– 1. ಸಂವಿಧಾನದ 17ನೆಯ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿದೆ.
2. 'ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ'ಯನ್ನು 1955 ರಲ್ಲಿ ಜಾರಿಮಾಡಲಾಗಿದೆ. 3. 'ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ' 1976ರಲ್ಲಿ ಜಾರಿಮಾಡಲಾಗಿದೆ. 4. ಅಸ್ಪೃಶ್ಯತೆಯ ಆಚರಣೆಯು ಶಿಕ್ಷಾರ್ಹ ಅಪರಾಧ. 5. ಸಾರ್ವತ್ರಿಕ ಮತದಾನಹಕ್ಕು ನೀಡಲಾಗಿದೆ 6. ಸಮಾನತೆಯ ಹಕ್ಕು ನೀಡಲಾಗಿದೆ 7. ಶೈಕ್ಷಣಿಕ, ರಾಜಕೀಯ, ಆರ್ಥಿಕ ಮೀಸಲಾತಿ 8. ಅಸ್ಪೃಶ್ಯತೆಯ ನಿರ್ಮೂಲನೆ ರಾಜ್ಯ ಸರ್ಕಾರಗಳಿಗೆ ವಿಶೇಷ ಜವಬ್ದಾರಿ ನೀಡಲಾಗಿದೆ.

ಮಾರ್ಗದರ್ಶಿ ಶಿಕ್ಷಕರು : **ಕೊಟ್ರೇಶ್ ಮಾಳಗಿ, ಸಮಾಜ ವಿಜ್ಞಾನ ಶಿಕ್ಷಕರು,** ಬ್ಯಾಸಗಿದೆರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055